# ಸಂಪ್ರೀತಿ ಸಮೃದ್ಧಿ

ನಿಮ್ಮ ಮನ ಮನೆಗಳಿಗೆ...

ಮಾಸಿಕ

Sampreethi - Samruddhi | Volume : 7 | Issue : 10 | Feb. 2025 | Pages : 32 | ₹ 20/-
ಸಂಪ್ರೀತಿ ಸಮೃದ್ಧಿ | ಸಂಪುಟ : 7 | ಸಂಚಿಕೆ : 10 | ಫೆಬ್ರವರಿ 2025 | ಪುಟಗಳು : 32 | ₹ 20 ರೂ.



## ಓಂ ನಮಃ ಶಿವಾಯ

ಪರಮೇಶ್ವರನ ಆರಾಧನೆಯ ಬಹುದೊಡ್ಡ ಹಬ್ಬ

# ಮಹಾಶಿವರಾತ್ರಿಯ

## ಶುಭಾಶಯಗಳು

# ಸಂಪ್ರೀತಿ ಸಮೃದ್ಧಿ

ನಿಮ್ಮ ಮನ ಮನೆಗಳಿಗೆ...




## ಜನವರಿ

| | | | | | |
|---|---|---|---|---|---|
| ಭಾನು | | 5 | 12 | 19 | 26 |
| ಸೋಮ | | 6 | 13 | 20 | 27 |
| ಮಂಗಳ | | 7 | 14 | 21 | 28 |
| ಬುಧ | 1 | 8 | 15 | 22 | 29 |
| ಗುರು | 2 | 9 | 16 | 23 | 30 |
| ಶುಕ್ರ | 3 | 10 | 17 | 24 | 31 |
| ಶನಿ | 4 | 11 | 18 | 25 | |

## ಫೆಬ್ರವರಿ

| | | | | | |
|---|---|---|---|---|---|
| ಭಾನು | | 2 | 9 | 16 | 23 |
| ಸೋಮ | | 3 | 10 | 17 | 24 |
| ಮಂಗಳ | | 4 | 11 | 18 | 25 |
| ಬುಧ | | 5 | 12 | 19 | 26 |
| ಗುರು | | 6 | 13 | 20 | 27 |
| ಶುಕ್ರ | | 7 | 14 | 21 | 28 |
| ಶನಿ | 1 | 8 | 15 | 22 | |

## ಮಾರ್ಚ್

| | | | | | |
|---|---|---|---|---|---|
| ಭಾನು | 30 | 2 | 9 | 16 | 23 |
| ಸೋಮ | 31 | 3 | 10 | 17 | 24 |
| ಮಂಗಳ | | 4 | 11 | 18 | 25 |
| ಬುಧ | | 5 | 12 | 19 | 26 |
| ಗುರು | | 6 | 13 | 20 | 27 |
| ಶುಕ್ರ | | 7 | 14 | 21 | 28 |
| ಶನಿ | 1 | 8 | 15 | 22 | 29 |

## ಏಪ್ರಿಲ್

| | | | | | |
|---|---|---|---|---|---|
| ಭಾನು | | 6 | 13 | 20 | 27 |
| ಸೋಮ | | 7 | 14 | 21 | 28 |
| ಮಂಗಳ | 1 | 8 | 15 | 22 | 29 |
| ಬುಧ | 2 | 9 | 16 | 23 | 30 |
| ಗುರು | 3 | 10 | 17 | 24 | |
| ಶುಕ್ರ | 4 | 11 | 18 | 25 | |
| ಶನಿ | 5 | 12 | 19 | 26 | |

## ಮೇ

| | | | | | |
|---|---|---|---|---|---|
| ಭಾನು | | 4 | 11 | 18 | 25 |
| ಸೋಮ | | 5 | 12 | 19 | 26 |
| ಮಂಗಳ | | 6 | 13 | 20 | 27 |
| ಬುಧ | | 7 | 14 | 21 | 28 |
| ಗುರು | 1 | 8 | 15 | 22 | 29 |
| ಶುಕ್ರ | 2 | 9 | 16 | 23 | 30 |
| ಶನಿ | 3 | 10 | 17 | 24 | 31 |

## ಜೂನ್

| | | | | | |
|---|---|---|---|---|---|
| ಭಾನು | 1 | 8 | 15 | 22 | 29 |
| ಸೋಮ | 2 | 9 | 16 | 23 | 30 |
| ಮಂಗಳ | 3 | 10 | 17 | 24 | |
| ಬುಧ | 4 | 11 | 18 | 25 | |
| ಗುರು | 5 | 12 | 19 | 26 | |
| ಶುಕ್ರ | 6 | 13 | 20 | 27 | |
| ಶನಿ | 7 | 14 | 21 | 28 | |

## ಜುಲೈ

| | | | | | |
|---|---|---|---|---|---|
| ಭಾನು | | 6 | 13 | 20 | 27 |
| ಸೋಮ | | 7 | 14 | 21 | 28 |
| ಮಂಗಳ | 1 | 8 | 15 | 22 | 29 |
| ಬುಧ | 2 | 9 | 16 | 23 | 30 |
| ಗುರು | 3 | 10 | 17 | 24 | 31 |
| ಶುಕ್ರ | 4 | 11 | 18 | 25 | |
| ಶನಿ | 5 | 12 | 19 | 26 | |

## ಆಗಸ್ಟ್

| | | | | | |
|---|---|---|---|---|---|
| ಭಾನು | 31 | 3 | 10 | 17 | 24 |
| ಸೋಮ | | 4 | 11 | 18 | 25 |
| ಮಂಗಳ | | 5 | 12 | 19 | 26 |
| ಬುಧ | | 6 | 13 | 20 | 27 |
| ಗುರು | | 7 | 14 | 21 | 28 |
| ಶುಕ್ರ | 1 | 8 | 15 | 22 | 29 |
| ಶನಿ | 2 | 9 | 16 | 23 | 30 |

## ಸೆಪ್ಟೆಂಬರ್

| | | | | | |
|---|---|---|---|---|---|
| ಭಾನು | | 7 | 14 | 21 | 28 |
| ಸೋಮ | 1 | 8 | 15 | 22 | 29 |
| ಮಂಗಳ | 2 | 9 | 16 | 23 | 30 |
| ಬುಧ | 3 | 10 | 17 | 24 | |
| ಗುರು | 4 | 11 | 18 | 25 | |
| ಶುಕ್ರ | 5 | 12 | 19 | 26 | |
| ಶನಿ | 6 | 13 | 20 | 27 | |

## ಅಕ್ಟೋಬರ್

| | | | | | |
|---|---|---|---|---|---|
| ಭಾನು | | 5 | 12 | 19 | 26 |
| ಸೋಮ | | 6 | 13 | 20 | 27 |
| ಮಂಗಳ | | 7 | 14 | 21 | 28 |
| ಬುಧ | 1 | 8 | 15 | 22 | 29 |
| ಗುರು | 2 | 9 | 16 | 23 | 30 |
| ಶುಕ್ರ | 3 | 10 | 17 | 24 | 31 |
| ಶನಿ | 4 | 11 | 18 | 25 | |

## ನವೆಂಬರ್

| | | | | | |
|---|---|---|---|---|---|
| ಭಾನು | 30 | 2 | 9 | 16 | 23 |
| ಸೋಮ | | 3 | 10 | 17 | 24 |
| ಮಂಗಳ | | 4 | 11 | 18 | 25 |
| ಬುಧ | | 5 | 12 | 19 | 26 |
| ಗುರು | | 6 | 13 | 20 | 27 |
| ಶುಕ್ರ | | 7 | 14 | 21 | 28 |
| ಶನಿ | 1 | 8 | 15 | 22 | 29 |

## ಡಿಸೆಂಬರ್

| | | | | | |
|---|---|---|---|---|---|
| ಭಾನು | | 7 | 14 | 21 | 28 |
| ಸೋಮ | 1 | 8 | 15 | 22 | 29 |
| ಮಂಗಳ | 2 | 9 | 16 | 23 | 30 |
| ಬುಧ | 3 | 10 | 17 | 24 | 31 |
| ಗುರು | 4 | 11 | 18 | 25 | |
| ಶುಕ್ರ | 5 | 12 | 19 | 26 | |
| ಶನಿ | 6 | 13 | 20 | 27 | |

# ಸಂಪ್ರೀತಿ – ಸಮೃದ್ಧಿ

ನಿಮ್ಮ ಮನ ಮನೆಗಳಿಗೆ...

ಮಾಸಿಕ

ಫೆಬ್ರವರಿ : 2025

ಸಂಪುಟ 7, ಸಂಚಿಕೆ 10


## ಸಂಪಾದಕೀಯ


ಸಂಪಾದಕರು

ಡಾ॥ ಸಿ. ನಂಜುಂಡಯ್ಯ



ಚಂದಾ ವಿವರ :

| | |
|---|---|
| 10 ವರ್ಷಕ್ಕೆ | ರೂ.2000/– |
| 05 ವರ್ಷಕ್ಕೆ | ರೂ.1000/– |
| 02 ವರ್ಷಕ್ಕೆ | ರೂ.500/– |

ಹಣವನ್ನು ಮನಿಯಾರ್ಡರ್, ಬ್ಯಾಂಕ್ ಡ್ರಾಫ್ಟ್ ಮೂಲಕ ಕೆಳಗಿನ ವಿಳಾಸಕ್ಕೆ ಕಳುಹಿಸಬಹುದು.

ಸಂಪಾದಕರು

ಸಂಪ್ರೀತಿ – ಸಮೃದ್ಧಿ

ನಂ. 83, ಬಸವಣ್ಣ ದೇವಸ್ಥಾನ ರಸ್ತೆ
ದೊಡ್ಡಸೋಮನಹಳ್ಳಿ,
ಮಾಗಡಿ ತಾಲ್ಲೂಕು,
ರಾಮನಗರ ಜಿಲ್ಲೆ– 562 131.

#66, ಸಂಪ್ರೀತಿ – ಸದನ
ಸರ್ಕಾರಿ ಆಸ್ಪತ್ರೆ ಪಕ್ಕದ ರಸ್ತೆ,
ಮಾಗಡಿ – 562 120 ರಾಮನಗರ ಜಿಲ್ಲೆ.

ಮುದ್ರಕರು

- ಕಂಪ್ಯೂಟರ್ ವರ್ಲ್ಡ್
  ಜಿ.ಟಿ.ವರ್ಲ್ಡ್ ಮಾಲ್ ಹತ್ತಿರ
  ಮಲ್ಲಿಗೆ ತೋಟ, ಮಾಗಡಿ ರಸ್ತೆ,
  ಬೆಂಗಳೂರು – 560 023.

- ಓದುಗರು ತಮ್ಮ ಅಭಿಪ್ರಾಯಗಳನ್ನು ಮತ್ತು ಲೇಖಕರು ಲೇಖನಗಳನ್ನು ಕೆಳಗಿನ ಈ–ಮೇಲ್ ವಿಳಾಸಕ್ಕೆ ಕಳುಹಿಸಬಹುದು.

sampreethisamruddhi@gmail.com

8971608213

ಸಂಪ್ರೀತಿ – ಸಮೃದ್ಧಿ


ಮಹಾಕವಿ ರವೀಂದ್ರನಾಥ ಟ್ಯಾಗೋರರು ಹೇಳುತ್ತಾರೆ "ಓ ದೇವನೇ, ನೀನು ನನ್ನನ್ನು ನಿನ್ನ ಈ ಜಗದ ಜಾತ್ರೆಗೆ ಕರೆಯಿಸಿರುವಿ. ಸೃಷ್ಟಿಕರ್ತನೇ, ನಿನ್ನ ಆತ್ಮೀಯ ಅತಿಥಿಯಾಗಿ ಈ ಜಗತ್ತಿನಲ್ಲಿ ನೂರು ವಸಂತ ಸಂತಸದಿಂದ ಬದುಕುವ ಸೌಭಾಗ್ಯ ನನ್ನದಾಗಿದೆ. ನೀನಿತ್ತ ಈ ದೇಹದ ವೀಣೆಯನ್ನು ಮಧುರವಾಗಿ ನುಡಿಸಿ ನಿನ್ನ ಉತ್ಸವಕ್ಕೆ ಶೋಭೆ ತರುವಂತೆ ನಾನಿಲ್ಲಿ ಬದುಕಿ ನಿನ್ನಡಿಗಳಿಗೆ ಎಡೆಯಾಗುವೆ." ರವೀಂದ್ರರು ಹೇಳುವಂತೆ ನಾವು ಈ ಜಗದಲ್ಲಿ ಆ ಮಹಾದೇವನ ಅತಿಥಿಗಳಾಗಿ ಹೆಮ್ಮೆಯಿಂದ ಬದುಕಬೇಕು, ಭಿಕ್ಷುಕರಾಗಿ ಅಲ್ಲ. ನಾವು ಇಲ್ಲಿಗೆ ಬಂದುದು ದೇವನ ಪ್ರಸಾದದಂತಿರುವ ಈ ಪ್ರಪಂಚವನ್ನು ಅನುಭವಿಸಿ ಆನಂದಿಸಲು ವಿನಾ ಗಳಿಸಲು, ಉಳಿಸಲು ಅಲ್ಲ. ಇದರರ್ಥ ನಾವು ದುಡಿಯಬಾರದೆಂದಲ್ಲ, ಆದರೆ ದುಡಿದು ಗಳಿಸಿದುದನ್ನು ದಾಸೋಹ ರೂಪದಲ್ಲಿ ಎಲ್ಲರೊಂದಿಗೆ ಹಂಚಿಕೊಂಡು ಅನುಭವಿಸಿ ಆನಂದಿಸಬೇಕು. ನೂರಾರು ಹೂದೋಟದ ಮಾಲಿಕನಾಗಿದ್ದರೂ ಒಂದು ಹೂವಿನ ಸೌಂದರ್ಯವನ್ನು ಅನುಭವಿಸದಿದ್ದರೆ, ಧನ್ಯತೆಯ ಭಾವ ತಾಳದೆ ಇದ್ದರೆ ಏನು ಪ್ರಯೋಜನ? ಎಷ್ಟೋ ಜನ ಜೀವನದ ತುಂಬಾ ನೌಕರಿ ಚಾಕರಿ ಮಾಡಿ ದೊಡ್ಡ ಮನೆ ಕಟ್ಟಿಸುತ್ತಾರೆ.

ಇನ್ನೇನು ಆ ಮನೆಯೊಳಗೆ ಹೋಗಿ ಇರಬೇಕೆನ್ನುವುದರಲ್ಲಿ ಇವರ ನೌಕರಿ ವರ್ಗಾವಣೆಯಾಗುತ್ತದೆ. ಬೇರೆ ಊರಿಗೆ ಹೋಗಿ ಮತ್ತೆ ಬಾಡಿಗೆ ಮನೆಯಲ್ಲಿರುತ್ತಾರೆ. ಇದು ಹೇಗೆಂದರೆ ದಿನವಿಡೀ ಅಡಿಗೆ ಮಾಡಿ ದಣಿದು ಸಂಜೆ ಹೊತ್ತು ಉಣ್ಣದೆ ಉಪವಾಸ ಮಲಗಿದಂತೆ. ಅರಮನೆಯಂಥ ಮನೆಯನ್ನು ಕಟ್ಟಿ ಮನೆಗೆ ಕೀಲಿ ಹಾಕಿ ಕಿಸೆಯಲ್ಲಿ ಕೀಲಿಕೈ ಇಟ್ಟುಕೊಂಡು ಊರೂರು ಅಲೆದರೆ ಅರಮನೆಯ ಅನುಭವ, ಆನಂದ ದೊರೆತೀತೆ? ಇಂದು ನಮ್ಮ ಶಾಲೆಗಳಲ್ಲಿ ವಾಣಿಜ್ಯ, ವಿಜ್ಞಾನ, ಕಲೆ ಏನೆಲ್ಲಾ ಕಲಿಸುತ್ತಾರೆ. ಆದರೆ ಎಲ್ಲರೊಂದಿಗೆ ಒಂದಾಗಿ ಚಂದಾಗಿ ಬದುಕುವುದನ್ನು ಕಲಿಸುವುದನ್ನು ಎಷ್ಟೋ ಸಲ ಮರೆಯುತ್ತಾರೆ. ಒಂದು ಹಕ್ಕಿ ಎರಡು ರೆಕ್ಕೆಗಳಿಂದ ಆಗಸದೆತ್ತರಕೆ ಏರಿ ಹಾಡುತ್ತ ಆಡುತ್ತ ಸ್ವರ್ಗವನ್ನು ನಾಚಿಸುತ್ತದೆ. ಏನೂ ಅರಿಯದ ಒಂದು ಮಗು ತುಂತುರ ಮಳೆಯಲ್ಲಿ ಮೈಮರೆತು ನಕ್ಕು ನಲಿದಾಡುತ್ತದೆ. ಆದರೆ ಆ ಮಗುವಿನ ಮೈಮೇಲಿನ ಉಡಿಗೆ–ತೊಡಿಗೆ ಕೊಳೆಯಾಗುತ್ತವೆಂದು ಪಾಲಕರು ಚಿಂತಿಸುತ್ತಿರುತ್ತಾರೆ. ಅಂದು ನಮ್ಮಲ್ಲಿದ್ದ ಆ ಮಗುವಿನ ಮುಗ್ಧ ಹೃದಯ ಇಂದು ನಮಗೇಕೆ ಇಲ್ಲವಾಯಿತು? ಎರಡು ಮನೆಗಳ ಮಧ್ಯದಲ್ಲಿರುವ ಮರ ನನ್ನದು ನಿನ್ನದೆಂದು ಮನೆಯವರು ನ್ಯಾಯಾಲಯದ ಮೆಟ್ಟಿಲು ಹತ್ತಿ ವರುಷ ವರುಷ ಅಲೆಯುತ್ತಾರೆ. ಆದರೆ ಆ ಮರದ ಹಣ್ಣನ್ನು, ನೆರಳನ್ನು ಅನುಭವಿಸುವುದಿಲ್ಲ, ಆನಂದಿಸುವುದಿಲ್ಲ. ನಾವೀ ಜಗತ್ತಿಗೆ ಬಂದುದು ಗಾಳಿಯಲ್ಲಿ ತೇಲಲು; ಸಾಗರದಲ್ಲಿ ಈಜಲು; ಸತ್ಯಂ ಶಿವಂ ಸುಂದರಂ ಸೃಷ್ಟಿಯನ್ನು ಅನುಭವಿಸಲು ಆನಂದಿಸಲು ವಿನಾ ಹೋರಾಡಲು ಅಲ್ಲ. ಶರಣರು ಹೇಳುವಂತೆ "ಕರ್ತಾರನ ಕಮ್ಮಟ" ಆಗಿರುವ ಈ ಪ್ರಪಂಚದಲ್ಲಿ ನಾವಾದರೂ ಸತ್ಕಾರ್ಯಗಳನ್ನು ಮಾಡಿ ದೇವನ ಕರುಣೆಗೆ ಪಾತ್ರರಾಗೋಣ. ಆ ಮುಗ್ಧ ಮಕ್ಕಳಿಂದ, ಹಕ್ಕಿಗಳಿಂದ, ಸಮಸ್ತ ಸೃಷ್ಟಿಯಿಂದ ಸಂತಸದಿಂದ ಸಂತೃಪ್ತಿಯಿಂದ ಬದುಕುವುದನ್ನು ಕಲಿಯೋಣ, ನಲಿಯೋಣ. ॐ



# ಶಿವರಾತ್ರಿಗೊಂದು ಶಿವ ಪ್ರಸಂಗ

✍ ಡಾ. ಗುರುರಾಜ ಪೋಶೆಟ್ಟಿಹಳ್ಳಿ (ಪ್ರಣವ)
ಸಂಸ್ಕೃತಿ ಚಿಂತಕರು

ಭಾರತೀಯರಿಗೆ ಮುನ್ನೂರ ಮೂವತ್ತು ಕೋಟಿ ದೇವತೆಗಳಿದ್ದರೂ ಸೃಷ್ಟಿ, ಸ್ಥಿತಿ, ಲಯಾಧಿಕಾರಿಗಳಾದ ತ್ರಿಮೂರ್ತಿಗಳಿಗೆ ಅಗ್ರ ಪ್ರಾಶಸ್ತ್ಯ, ತ್ರಿಮೂರ್ತಿಗಳಲ್ಲಿ ಬ್ರಹ್ಮಜ್ಞಾನದ ಪ್ರತೀಕ ಸೃಷ್ಟಿಕರ್ತ. ವಿಷ್ಣು ಲೋಕ ಪರಿಪಾಲಕ, ಶಿವ ಜ್ಞಾನದ ಪ್ರತೀಕ; ಓಂಕಾರ ಸ್ವರೂಪ, ನಾದರೂಪಿ ಲಯಕಾರಕ. ಈತ ಗೌರಿಗೆ ತನ್ನ ಅರ್ಧ ದೇಹವನ್ನೇ ಕೊಟ್ಟ ಸಮನ್ವಯವಾದಿ – ಅರ್ಧನಾರೀಶ್ವರ. ಗಂಗೆಯನ್ನು ತಲೆಯ ಮೇಲೆ ಕೂಡಿಸಿಕೊಂಡ ಹೆಗ್ಗಳಿಕೆಯ ಗಂಗಾಧರ.

ಪ್ರಪಂಚದ ಲಯಕರ್ತ ಈತ. ಶಾಂತ–ರೌದ್ರಗಳ ದ್ವಿಸ್ವರೂಪಿ. ತಮೋಗುಣದ ಪ್ರತೀಕವೂ, ಲಯಸುಳಿಯ ಕೇಂದ್ರವೂ ವಿಕರಣದ ಮತ್ತು ನಿಶ್ಶೇಷ ಲಯದ ಪ್ರತೀಕವೂ ಶಿವ. ಹುಟ್ಟಿದ್ದೆಲ್ಲವೂ ಮರಣ ಹೊಂದಲೇಬೇಕು. ಉತ್ಪತ್ತಿಯಾದುದೆಲ್ಲವೂ ವಿಘಟಿತವಾಗಬೇಕು, ನಾಶವಾಗಬೇಕು. ಇದು ಅಲಂಘ್ಯ ನಿಯಮ. ಈ ವಿಘಟನೆಯುಂಟು ಮಾಡುವ ತತ್ವವೇ 'ಶಿವ' ತತ್ವ.

ಶಿವೋಪಾಸನೆ ಅತಿ ಪ್ರಾಚೀನ. ಋಗ್ವೇದದಲ್ಲಿ ಅಲ್ಲಲ್ಲಿ ರುದ್ರನ ಉಲ್ಲೇಖ ಬರುತ್ತದೆ. ರುದ್ರ ಸೂಕ್ತಗಳಿವೆ. ಯಜುರ್ವೇದದ ಒಂದು ಇಡೀ ಅಧ್ಯಾಯ 'ಶ್ರೀ ರುದ್ರಾಧ್ಯಾಯ' ಎಂದು ಖ್ಯಾತ. ಇದು ಶಿವಾರ್ಚನೆಯ ಮಂತ್ರಗಳ ಸಂಗ್ರಹ. ಇದರಲ್ಲಿ ಶಿವನ ವಿಶ್ವವಿರಾಟ್ ಸ್ವರೂಪದ ವರ್ಣನೆಯ ಜತೆಗೆ ಅವನನ್ನು ಕಾಣುವ ಬಗೆಯನ್ನು ರಮಣೀಯವಾಗಿ ವರ್ಣಿಸಲಾಗಿದೆ.

**ಪಂಚರೂಪಿ ಶಿವ**

ಪ್ರಾಚೀನ ಪಂಚದೇವೋಪಾಸನೆಯ ವಿವರದಂತೆ ಶಿವನನ್ನು ಪಂಚಮುಖೀ ಎಂದು ಕರೆಯಲಾಗಿದೆ. ಅವನ ಪಂಚಮುಖಗಳನ್ನು ಪಂಚಾಗ್ನಿ, ಪಂಚದೇವತಾ, ಪಂಚಲೋಕ, ಪಂಚಕ್ಲೇಶ, ಪಂಚಕೋಶ ಇವುಗಳ ಪ್ರತೀಕ ಎಂಬುದು ಶೈವಾರಾಧನೆಯ ಪರಂಪರೆಯ ಸಿದ್ಧಾಂತ.

ಚಿದ್ಭಾವದಿಂದ ವಿಷ್ಣುರೂಪಿ, ಸದ್ಭಾವದಿಂದ ಶಿವರೂಪಿ, ಶಕ್ತಿಭಾವದಿಂದ ಶಕ್ತಿಸ್ವರೂಪಿ ತೇಜಸ್ ಸ್ವಭಾವದಿಂದ ಸೂರ್ಯ, ಬುದ್ಧಿಭಾವದಿಂದ ಗಣೇಶರೂಪಿ. ಅಘೋರ, ತತ್ಪುರುಷ, ಈಶಾನ, ವಾಮದೇವ, ಸದ್ಯೋಜಾತ ಎಂಬ ಐದು ರೂಪಗಳ ಸವಿಸ್ತಾರ ವರ್ಣನೆ ವೇದಗಳಲ್ಲಿದೆ.

ಇವು ಪೃಥ್ವೀ, ಜಲ, ತೇಜಸ್ಸು, ಆಕಾಶ, ವಾಯು ಎಂಬ ಪಂಚಭೂತಗಳ ಆಧಿಪತ್ಯದ ಸಂಕೇತವಾಗಿದೆ. ಹಾಗೆಯೇ ಶಬ್ದ, ರೂಪ, ರಸ, ಗಂಧ ಸ್ಪರ್ಶ ಎಂಬ ಪಂಚತನ್ಮಾತ್ರೆಗಳ ಮೇಲೆ ಮಾನವನಿಗೆ ತಕ್ಕ ನಿಯಂತ್ರಣ ಇರಬೇಕು ಎಂಬುದು ಶಿವನ ಈ ಪಂಚಮುಖಗಳ ತತ್ವ – ಸಂದೇಶ.

ಪರಶುರಾಮನಿಗೆ ಧನುರ್ವಿದ್ಯೇ ಧಾರೆಯೆರೆದವನೂ ಅರ್ಜುನನಿಗೆ ಪಾಶುಪತಸ್ತ್ರ ಕರುಣಿಸಿದವನೂ ಶಿವನೇ.

**ಶಿವದರ್ಶನ ಹೇಗೆ?**

ಶಿವನ ದರ್ಶನವನ್ನು ಹೇಗೆ ಮಾಡಬೇಕು? ಶಿವಾಲಯದಲ್ಲಿ ಮುಂದೆ ಇರುವ ನಂದಿಯ ವೃಷಣವನ್ನು ಒಂದು ಕೈಯಲ್ಲಿ ಹಿಡಿದು, ಇನ್ನೊಂದು ಕೈಯಿಂದ ನಂದಿಯ ಕೋಡುಗಳ ಮೇಲೆ ಬೆರಳಿಟ್ಟು, ಅದರ ಮಧ್ಯದಿಂದ ಶಿವ ದರ್ಶನ ಮಾಡಬೇಕು ಎಂಬುದು ರೂಢಿ.

ಈ ಪದ್ಧತಿ ಸಾಕಷ್ಟು ಜಿಜ್ಞಾಸೆಗೆ ಒಳಗಾಗಿರುವ ಅಂಶ ಬ್ರಹ್ಮಾಂಡಕ್ಕೆ ಪ್ರತೀಕವಾಗಿರುವ ನಂದಿಯ ಮೂಲಕ ಎರಡು ಹುಬ್ಬುಗಳ ಮಧ್ಯೆ ಇರುವ ಅಂತಃಚಕ್ಷುವಿನಿಂದ ಸರ್ವಶಕ್ತ್ಯಾತ್ಮಕನಾದ ಶಿವನನ್ನು ದರ್ಶಿಸಬೇಕು ಎಂಬುದೇ ಇದರ ತಾತ್ಪರ್ಯ.

ಮನುಷ್ಯ ಪೂರ್ಣತ್ವ ಸಾಧಿಸಬೇಕಿದ್ದರೆ ಮನಸ್ಸು ಬುದ್ಧಿಯಲ್ಲಿ ಲಯವಾಗಬೇಕು. ಇದೇ ಶಿವರಾತ್ರಿಯ ತತ್ವ ಹಾಗಾಗಿ ಜ್ಞಾನಾಧಿದೇವತೆ ಶಿವನ ಆರಾಧನೆಗೆ ಉತ್ಕೃಷ್ಟವಾದ ಪರ್ವಕಾಲ ಮಹಾಶಿವರಾತ್ರಿ. ಆ ದಿನ ರಾತ್ರಿ ಹದಿನಾರನೇ ಒಂದಂಶದ ಚತುರ್ದಶಿಯ ಚಂದ್ರನ್ನು ಧರಿಸಿದ ಶಿವನನ್ನು ಪೂಜಿಸಿ ಜಾಗರಣೆ, ಶಾಸ್ತ್ರ ಶ್ರವಣಾದಿಗಳ ಮೂಲಕ ಪೂರ್ಣ ಜ್ಞಾನ ಪಡೆಯಬೇಕು.

ಶಿವರಾತ್ರಿಯಂದು ರಾತ್ರಿ ನಾಲ್ಕು ಯಾಮಗಳಲ್ಲಿ ಪೂಜೆ ಮಾಡುವರು ಮೊದಲನೆಯ ಜಾವದಲ್ಲಿ ಬಿಲ್ವಪತ್ರೆಯಿಂದಲೂ, ಎರಡನೆಯ ಜಾವದಲ್ಲಿ ದ್ರೋಣ ಪುಷ್ಪದಿಂದ, ಮೂರನೆಯ ಜಾವದಲ್ಲಿ ಅರ್ಕಪುಷ್ಪದಿಂದ, ನಾಲ್ಕನೆ ಜಾವದಲ್ಲಿ ಕದಂಬ ಪುಷ್ಪಗಳಿಂದ ಪೂಜಿಸಿದರೆ ರೋಗ ನಿವೃತ್ತಿ, ನೆಮ್ಮದಿ, ಅಷ್ಟೈಶ್ವರ್ಯ, ಮೋಕ್ಷ ಪ್ರಾಪ್ತಿ.

ಹಾಸ್ಯ ಪ್ರಕೃತಿ,
ಅಪಹಾಸ್ಯ ವಿಕೃತಿ,
ತಿಳಿಹಾಸ್ಯ ಸಂಸ್ಕೃತಿ.

**ವಿಭೂತಿಯ ಮಹತ್ವ**

ವಿಭೂತಿಗೂ ಶಿವನಿಗೂ ಅನನ್ಯ ಸಂಬಂಧ ಪರಮೇಶ್ವರನಿಗೆ 'ಭಸ್ಮೋದ್ಧೂಳಿತ', 'ಭಸ್ಮಾನುಲೇಪಿತ' ಮೊದಲಾದ ವಿಶೇಷಣಗಳು ವಿಭೂತಿಯ ಧಾರಣೆ ಮಾಡುವುದರಿಂದ ಮೇಧಾಶಕ್ತಿ ವರ್ಧಿಸುತ್ತದೆ. ಮಿದುಳಿನ ಬಲವರ್ಧನೆಗೆ ಸಹಕಾರಿಯಾಗುತ್ತದೆ. ಅದರ ಪರಿಣಾಮವಾಗಿ ಮಾನಸಿಕ ಪ್ರಸನ್ನತೆ ಲಭಿಸುತ್ತದೆ.

ಗರುಡಚಯನ, ಸೋಮಯಾಗ ಮತ್ತು ಅತಿರುದ್ರಾದಿ ಮಹಾಯಾಗಗಳಲ್ಲಿ ಗಣಪತಿ ಹವನ, ಗ್ರಹ ಶಾಂತಿ ಮುಂತಾದ ಹೋಮದಲ್ಲಿ ಹವಿಸ್ಸಿನ ದಹನದಿಂದ ಒದಗಿದ ಭಸ್ಮವು ಉತ್ಕೃಷ್ಟ ವಿಭೂತಿಯೆನಿಸುವುದು.

**ಶಿವ ಪರಿವಾರ**

ನಂದಿಯಿಲ್ಲದ ಶಿವಾಲಯವಿಲ್ಲ. ಇವನು ಶಿವಗಣಗಳ ನಾಯಕ. ವೃಷಭವು ಕಾಮದ – ವೀರತ್ವದ ದ್ಯೋತಕ. ಶಿವನು ಇದನ್ನೇ ವಾಹನವನ್ನಾಗಿ ಮಾಡಿಕೊಂಡಿದ್ದಾನೆಂದರೆ ಕಾಮವನ್ನು ಜಯಿಸಿ ತನ್ನ ಪ್ರಭುತ್ವವನ್ನು ಸ್ಥಾಪಿಸಿದ್ದಾನೆಂದು ಅರ್ಥ.

ನಂದಿಯನಂತರ ಬರುವ ಪ್ರಮುಖ ಭೃಂಗಿ. ಈತನು ಶಿವನಲ್ಲಿ ಏಕನಿಷ್ಠೆಯ ಭಕ್ತ. ಪಾರ್ವತಿಯು ಶಿವನಲ್ಲಿ ಐಕ್ಯವಾಗಿ, ಶಿವ ಅರ್ಧನಾರೀಶ್ವರ ರೂಪ ಪಡೆದಾಗಲೂ ಭೃಂಗಿ (ದುಂಬಿ) ಭೃಂಗದ ರೂಪ ಧರಿಸಿ ಶಿವನಿಗೆ ಪ್ರದಕ್ಷಿಣೆ ಬರುತ್ತ ಅರ್ಧನಾರೀಶ್ವರನನ್ನೇ ಮಧ್ಯದಲ್ಲಿ ಕೊರೆದನಂತೆ. ಆದ್ದರಿಂದಲೇ ಇವನಿಗೆ 'ಭೃಂಗ' ಎಂದು ಹೆಸರು ಬಂತೆಂದು ಪ್ರತೀತಿ.

ಶಿವನೊಂದಿಗೆ ನಿಕಟ ಸಂಬಂಧ ಹೊಂದಿದ ಇನ್ನೊಬ್ಬ ದೇವತೆಯೆಂದರೆ ವೀರಭದ್ರ. ದಕ್ಷ ಸಂಹಾರಕ್ಕಾಗಿ ನಿಯುಕ್ತನಾದ ಶಿವನ ಶಕ್ತಿಯು ಸ್ವರೂಪ. ವೀರಭದ್ರನ ಅನಂತರ ಬರುವ ದೇವತೆ ಚಂಡೇಶ್ವರ. ಇವನು ಮನುಷ್ಯವರ್ಗದ ಮಹಾಭಕ್ತ. ಶಿವನ ಇತರ ಅನುಚರರೆಂದರೆ ಅವನ ಗಣಗಳು.

ಇವು ಹೆಚ್ಚಾಗಿ ಪ್ರಮಥ ಅಥವಾ ಭೂತಗಣಗಳೆಂದು ಪ್ರಸಿದ್ಧ.

**ರುದ್ರಾಕ್ಷಿಯ ಮಹತ್ವ**

ರುದ್ರಾಕ್ಷಿಯಲ್ಲಿ ಶಿವನ ಸಾನ್ನಿಧ್ಯ ಇದೆ ಎಂಬುದು ರೂಢಿಗತ ನಂಬಿಕೆ. ಸಾಲಿಗ್ರಾಮ, ಶಿವಲಿಂಗ, ಬಿಲ್ವಪತ್ರೆ, ತುಳಸಿ, ವಿಭೂತಿಗಳಂತೆ ಅದು ವಿಶಿಷ್ಟ. ರುದ್ರಾಕ್ಷವು ಶಿವಾರಾಧಕರಿಗೆ ಅತ್ಯಂತ ಪವಿತ್ರ.

ಶಿವ ರಹಸ್ಯದಲ್ಲಿ ತಿಳಿಸಿರುವಂತೆ ಶಿವನ ನೇತ್ರಗಳಿಂದ ಹುಟ್ಟಿ ರುದ್ರನ ಅಕ್ಷಿಗಳೆಂದು ಹೇಳಲ್ಪಟ್ಟು 'ರುದ್ರಾಕ್ಷಿ' ಎಂದಾಯಿತು.

ರುದ್ರಾಕ್ಷಿ ಮಣಿಗೆ ಒಂದರಿಂದ ಹದಿನಾಲ್ಕು ಮುಖಗಳಿರುತ್ತವೆ. ಇವುಗಳ ಮಾಲೆಯನ್ನು ಧರಿಸುವುದರಂದ ರೋಗಗಳ ನಿವಾರಣೆಯಾಗಿ ಮಂತ್ರಸಿದ್ಧಿ ಯಾಗುತ್ತದೆಯೆಂದು ನಂಬಿಕೆ.

**ಮನೆ ಮದ್ದು :**

ಮೆಂತ್ಯೆ ಕಾಳಿನಲ್ಲಿ ಪೊಟ್ಯಾಸಿಯಮ್ ಹೇರಳವಾಗಿದ್ದು ಇದು ಹೃದಯಾಘಾತದಿಂದ ತಪ್ಪಿಸುತ್ತದೆ.

ಒಂದು ಮುಖವುಳ್ಳ ರುದ್ರಾಕ್ಷಿ ಪರಬ್ರಹ್ಮ ಸ್ವರೂಪವಾಗಿದ್ದು, ಅದನ್ನು ಧರಿಸಿದವರು ಜಿತೇಂದ್ರಿಯರಾಗುತ್ತಾರೆ. ಎರಡು ಮುಖವುಳ್ಳ ರುದ್ರಾಕ್ಷಿಯು ಅರ್ಧನಾರೀಶ್ವರ ರೂಪಿ. ಅದರ ಧಾರಣೆಯಿಂದ ಶಿವನಿಗೆ ಪರಮಪ್ರಿಯರಾಗುವರೆಂದು ನಂಬಿಕೆ. ಮೂರು ಮುಖಗಳ ರುದ್ರಾಕ್ಷಿಯು ಅಗ್ನಿತ್ರಯ ಸ್ವರೂಪ. ನಾಲ್ಕು ಮುಖದ ರುದ್ರಾಕ್ಷಿ ಪರಬ್ರಹ್ಮದ ಪ್ರತೀಕ. ಐದು ಮುಖದ್ದು ಸಾಕ್ಷಾತ್ ಪರಶಿವ ಸ್ವರೂಪ ಎಂಬ ಭಾವನೆ. ಅದಕ್ಕೆ ಕಾಲಾಗ್ನಿ ಎಂಬ ಹೆಸರು. ಆರು ಮುಖದ ರುದ್ರಾಕ್ಷಿಯು ಷಣ್ಮುಖ ಮತ್ತು ಗಣಪತಿ ದೇವತಾ ಸ್ವರೂಪಿ. ಏಳು ಮುಖಗಳ ರುದ್ರಾಕ್ಷಿ ಸಪ್ತನಿಧಿ, ಸಪ್ತಾಶ್ವ, ಸಪ್ತ ಮಾತೃಕೆಯ ಸಾನ್ನಿಧ್ಯ ಹೊಂದಿದೆ. ಎಂಟು ಮೊಗದ ರುದ್ರಾಕ್ಷಿಯು ಅಷ್ಟಮೂರ್ತಿ ಮತ್ತು ಅಷ್ಟವಸು ಸ್ವರೂಪಿ. ಒಂಭತ್ತು ಮುಖದ ರುದ್ರಾಕ್ಷಿ ಶಕ್ತಿಯ ಪ್ರತೀಕ. ಹತ್ತು ಮೊಗದ ರುದ್ರಾಕ್ಷಿಯು ಯಮದೇವಾತ್ಮಕವಾದುದು. ಹನ್ನೊಂದು ಮುಖಗಳ  ರುದ್ರಾಕ್ಷಿ ಏಕಾದಶರುದ್ರ. ಹನ್ನೆರಡು ಮುಖಗಳ ರುದ್ರಾಕ್ಷಿಯು ದ್ವಾದಶಾದಿತ್ಯ ಸ್ವರೂಪಿ. ಹದಿಮೂರು ವದನ ರುದ್ರಾಕ್ಷಿಯು ಕಾಮನ ಪ್ರತೀಕ. ಹದಿನಾಲ್ಕು ವದನ ರುದ್ರಾಕ್ಷಿಯು ಕಾಮನ ಪ್ರತೀಕ. ಹದಿನಾಲ್ಕು ಕಣ್ಣುಗಳ ರುದ್ರಾಕ್ಷಿಯು ರುದ್ರನೇತ್ರ ಸ್ವರೂಪಿ. ಇದನ್ನು ಧರಿಸುವುದರಿಂದ ಸಮಸ್ತ ವ್ಯಾಧಿ ನಿವಾರಣೆ.

ಶಿವನು ಯೋಗಾಚಾರ್ಯ, ಸಂಗೀತ, ನೃತ್ಯ, ಕಲೆಯ, ಮಹಾಗುರು, ದಕ್ಷಿಣಾಮೂರ್ತಿ, ಪರಿಪೂರ್ಣ, ಲೋಕ ಗುರುವಿನ ಆದರ್ಶರೂಪವೇ ದಕ್ಷಿಣಾಮೂರ್ತಿ.

**ಶಿವ ತತ್ವ ರಹಸ್ಯ :** ಶಿವ ತ್ರಿನೇತ್ರ. ಸೂರ್ಯ, ಚಂದ್ರ ಮತ್ತು ಅಗ್ನಿಗಳ ಪ್ರತೀಕ. ಈ ನೇತ್ರಗಳಲ್ಲಿ ಎರಡು ಕಣ್ಣುಗಳು ಬಾಹ್ಯ ಜಗತ್ತನ್ನು ಅವಲೋಕಿಸುತ್ತಿದ್ದರೆ, ಮತ್ತೊಂದು ಅಂತರ್ಮುಖಿ. ಅದೇ ಜ್ಞಾನ ನೇತ್ರ. ಅದು ತೆರೆದಾಗ ಭೂತ, ಭವಿಷ್ಯ, ವರ್ತಮಾನಗಳ ದರ್ಶನ. ಮೂರನೇ ಕಣ್ಣು ತೆರೆದರೆ ಅದು ಪ್ರಳಯಕಾರಿ.

ಶಿವ, ಚಂದ್ರನನ್ನೇ ತಲೆಯಲ್ಲಿ ಧರಿಸಿದ್ದಾನೆ. ಚಂದ್ರನು ಸಾಂಕೇತಿಕವಾಗಿ ಕಾಲವನ್ನು ವ್ಯಕ್ತಪಡಿಸುತ್ತಾನೆ. ಕಾಲವು ಮಾನವನ ದೃಷ್ಟಿಯಿಂದ ಗಣನೆಗೆ ಸೀಮಿತ. ಭಗವಂತ ಕಾಲಾತೀತ. ಚಂದ್ರನನ್ನು ಶಿರಸ್ಸಿನಲ್ಲಿ ಧರಿಸಿದ ಶಿವನ ಕಲ್ಪನೆಯು ಸಾಂಕೇತಿಕವಾಗಿ ಅದನ್ನೇ ಸೂಚಿಸುತ್ತದೆ.

ಅವನ ತ್ರಿಶೂಲ ಸತ್ವ, ರಜ, ತಮೋ ಗುಣಗಳ ಸಂಕೇತ. ಶಿವನು ಹಿಮದಂತೆ ಧವಲ ಮೂರ್ತಿ, ಶ್ವೇತ ಮುಖ. ಬೆಳಕಿನ ಸಂಕೇತ. ಅಂದರೆ ಅಜ್ಞಾನವನ್ನು ಅಳಿಸಿ ಅರಿವನ್ನು ಬೆಳಗುವ ಜ್ಞಾನದ ಪ್ರತೀಕ, ಕಾಮ ದಹನದ ವೃತ್ತಾಂತ, ದಿಗಂಬರತ್ವ ಶಿವ ವೈರಾಗ್ಯಮೂರ್ತಿ ಎಂಬುದನ್ನು ಸೂಚಿಸುತ್ತದೆ. ಶಿವನು ಧರಿಸುವ ತಲೆಬುರುಡೆಗಳ ಹಾರ ಮತ್ತು ಚಿತಾಭಸ್ಮಧಾರಣೆ ಪ್ರಳಯಕಾರಕ ಎಂಬುದರ ಸಂಕೇತ. ತಲೆಬುರುಡೆಗಳ ಮಾಲೆಯು ಕಾಲಪ್ರವಾಹದ ಆವರ್ತಗಳನ್ನು, ಮನುಕುಲದ ವಿನಾಶ ಮತ್ತು ಪುನಃಸೃಷ್ಟಿಯ ಚಕ್ರವನ್ನು ಸೂಚಿಸುತ್ತದೆ.

ಶಿವ ಸರ್ಪಭೂಷಣ. ಅಂಥವನು ಮಾತ್ರ ಹಾಲಾಹಲದಂತಹ ಘೋರ ವಿಷವನ್ನು ನುಂಗಿ ಜಗತ್ತನ್ನು ಕಾಪಾಡಬಲ್ಲ. ಹಾಗಾಗಿಯೇ ಶಿವ ಮೃತ್ಯುಂಜಯ. ಶಿವನು ತಾಂಡವನೃತ್ಯ ಮಾಡುತ್ತಿರುವಾಗ ಹದಿನಾಲ್ಕು ಬಾರಿ ಡಮರುಗವನ್ನು ನುಡಿಸಿದನೆಂದೂ, ಅ-ಇ-ಉಣ್-ಋ-ಲ-ಕ್ ಮೊದಲಾದ ಸ್ವರಗಳು, ಅಂದರೆ ಮಾಹೇಶ್ವರ ಸೂತ್ರಗಳು, ಎಲ್ಲ ಅಕ್ಷರಗಳಿಗೂ ಮೂಲವಾದ ಹದಿನಾಲ್ಕು ಮೂಲಸೂತ್ರಗಳು ಹೊರಬಿದ್ದವೆಂದೂ, ಮುಂದೆ ವ್ಯಾಕರಣ ಪ್ರಕ್ರಿಯೆಗಳಿಗೂ ಅವೇ ದಾರಿ ಮಾಡಿಕೊಟ್ಟಿತೆಂಬುದು ತಾತ್ವಿಕ ಸಿದ್ಧಾಂತ. ಡಮರುಗ ವರ್ಣಗಳ ಮತ್ತು ವ್ಯಾಕರಣದ ಪ್ರತಿನಿಧಿ ಎಂದೇ ಹೇಳಬಹುದು. ವ್ಯಕ್ತ-ಅವ್ಯಕ್ತ ವಾಙ್ಮಯದ ಏಕೈಕ ಪ್ರತೀಕವಿದು.

ಅಕ್ಷಮಾಲೆಯು ಶಿವನು ಆಧ್ಯಾತ್ಮವಿದ್ಯೆಯ ಆದಿಗುರುವೆಂದು ಸೂಚಿಸಿದರೆ ಖಟ್ವಾಂಗವು ಅವನು ಮಂತ್ರವಿದ್ಯೆಯಲ್ಲೂ

ಪ್ರವೀಣನೆಂದು ತೋರಿಸುವುದು. ಶಿವನು ರಕ್ತಪಾನ ಮಾಡುವ ಕಪಾಲವು ಅವನ ಸರ್ವವಿನಾಶ ಶಕ್ತಿಯ ಮತ್ತೊಂದು ಸಂಕೇತ. ದರ್ಪಣವು ಸೃಷ್ಟಿಯ ಪ್ರತಿಬಿಂಬವನ್ನು ಸೂಚಿಸುತ್ತದೆ.

ಪರಮೇಶ್ವರನ ಅರ್ಚನಾ ಕ್ರಮಗಳಲ್ಲಿ ಅಭಿಷೇಕಕ್ಕೆ ಪ್ರಾಶಸ್ತ್ಯ. 'ಅಭಿಷೇಕ ಪ್ರಿಯಃ ಶಿವ' ಎಂಬ ವಚನ ಜನಜನಿತ. ಲಿಂಗರೂಪಿ ಶಿವನಿಗೆ ಧಾರಾಕಾರವಾಗಿ ಜಲದಿಂದ ಅಭಿಷೇಕ ಮಾಡುವ ಪದ್ಧತಿಯಲ್ಲಿ ಉಪಾಸನೆಯ ರಹಸ್ಯವೂ ಅಡಗಿದೆ.

ಭಗವಂತನೂ ತೇಜೋರೂಪದಿಂದ ಪಾತಾಳದಿಂದ ದ್ಯುಲೋಕದವರೆಗೆ ವ್ಯಾಪಿಸಿಕೊಂಡಾಗ ಆತನ ಅವಿರ್ಭಾವವು ಲಿಂಗಾಕಾರವಾಗಿತ್ತು.

ಇದು ಪರಮೇಶ್ವರನು ದೇವತೆಗಳಿಗಾಗಿ ಪ್ರಕಟಿಸಿದ ರೂಪವಾಗಿತ್ತು. ಇಂಥ ರೂಪವನ್ನು ಚಿಂತಿಸುತ್ತಾ ರುದ್ರಾಧ್ಯಾಯವನ್ನು ಪಠಿಸುತ್ತಾ ಅಭಿಷೇಕ ಮಾಡುವುದು ವಿಧಿ. ಶಿವಲಿಂಗದ ಅಭಿಷೇಕಕ್ಕೆ ಮೇಲೆ ಕಟ್ಟುವ ಧಾರಾಪಾತ್ರೆಯು ಶಿವದೇವಾಲಯಗಳ ವೈಶಿಷ್ಟ್ಯ.

**ಬಿಲ್ವ ವೃಕ್ಷ :**

ಎಲ್ಲಿ ಶಿವಾಲಯವೋ ಅಲ್ಲಿ ಬಿಲ್ವವಕ್ಷ, ಎಲ್ಲಿ ಶಿವಪೂಜೆ ನಡೆಯುತ್ತದೋ ಅಲ್ಲಿ ಬಿಲ್ವಪತ್ರೆ. ಶಿವಾರ್ಚನೆಗೆ ಬಿಲ್ವಪತ್ರೆ ಎಲ್ಲಕ್ಕಿಂತ ಪವಿತ್ರವಾದದ್ದು. 'ತ್ರಿಜನ್ಮಪಾಪ ಸಂಹಾರಂ ಏಕಬಿಲ್ವಂ ಶಿವಾರ್ಪಣಂ' ಎಂಬ ಮಂತ್ರವೊಂದೇ ಸಾಕು ಬಿಲ್ವದ ಮಹತ್ವವನ್ನು ಹೇಳಲು.

ಬಿಲ್ವವು ಅಶ್ವತ್ಥ, ಔದುಂಬರಾದಿಗಳಂತೆ ದೇವವೃಕ್ಷ. ಅದು ಭೌತಿಕವಾಗಿಯೂ, ಆಧ್ಯಾತ್ಮಿಕವಾಗಿಯೂ ಪ್ರಖ್ಯಾತ. ಇದರ ಮಹಿಮೆಯನ್ನು ಶ್ರೀಸೂಕ್ತ, ಸೌಭಾಗ್ಯ ಸಂಜೀವಿನಿ, ಸನತ್ಕುಮಾರ ಸಂಹಿತೆ, ಸಾರಸ್ವತ ಸಿದ್ಧಿ, ವಾಮನ ಪುರಾಣ, ಶಿವಪುರಾಣ ಮುಂತಾದ ಗ್ರಂಥಗಳಲ್ಲಿ ವಿವರಿಸಲಾಗಿದೆ.

ಬಿಲ್ವಪತ್ರೆ ಒಣಗಿದ್ದರೂ ಒಂದು ಸಲ ಅರ್ಚಿಸಿದರೂ ನೀರಿನಿಂದ ತೊಳೆದು ಪುನಃ ಅರ್ಚಿಸಬಹುದೆಂದು ಶಾಸ್ತ್ರಮತ. ಸ್ಕಂದ ಪುರಾಣದಲ್ಲಿ ರೋಚಕವಾದ ಕಥೆಯೊಂದುಂಟು. ಲಕ್ಷ್ಮೀನಾರಾಯಣರು ಶಿವನನ್ನು ಕುರಿತು ತಪಸ್ಸು ಮಾಡಿದರಂತೆ. ಆಗ ಲಕ್ಷ್ಮಿಯ ಬಲಗೈಯಿಂದ ಬಿಲ್ವದ ಮರಹುಟ್ಟಿತಂತೆ. ಅದಕ್ಕೆಂದೇ ಶ್ರೀವಕ್ಷ ಎಂದು ಹೆಸರು ಪಡೆಯಿತು. ತ್ರಿಗುಣಗಳನ್ನು ಸಂಕೇತಿಸುವ ಅದರ ಎಲೆಯ ಮೂರು ಎಸಳುಗಳನ್ನು ತ್ರಿಮೂರ್ತಿಗಳ ಮೂರು ವೇದಗಳ ಪ್ರತೀಕ.

ಬಿಲ್ವವಕ್ಷದ ಕೆಳಗೆ ಕುಳಿತು ಲಕ್ಷ್ಮಿ ಮಂತ್ರವನ್ನು ಪುನಶ್ಚರಣೆ ಮಾಡಿದರೆ ಸಿದ್ಧಿಯಾಗುವುದೆಂದು ನಂಬಿಕೆ. ತುಳಸಿ, ನೆಲ್ಲಿ, ಬಿಲ್ವ ಇವು ಮೂರು ಪಾರ್ವತಿ, ಸರಸ್ವತಿ, ಲಕ್ಷ್ಮಿ ಸ್ವರೂಪದಿಂದ ದೇವತೆಗಳ ಅಂಶವೆಂದು ಪುರಾಣಗಳು ಸಾರುತ್ತವೆ. ಬಿಲ್ವ, ಚರು, ಆಜ್ಯಗಳಿಂದ ಹೋಮ ಮಾಡುವುದರಿಂದ ದಾರಿದ್ರವು ನಿರ್ನಾಮವಾಗಿ ಲಕ್ಷ್ಮಿಯು ಗೃಹದಲ್ಲಿ ಸ್ಥಿರವಾಗಿರುವಳೆಂದು ಧರ್ಮಗ್ರಂಥಗಳಲ್ಲಿ ನಿರೂಪಣೆ ಇದೆ.

ಶಿವಪುರಾಣಗಳಲ್ಲಿ ಶಿವರಾತ್ರಿಯ ಮಹಿಮೆಯನ್ನು ತಿಳಿಸುತ್ತಾ ಓರ್ವ ಬೇಡನೂ, ಚಂಡಾಲಿಯೂ ಎಸೆದ



ಬೆಂಕಿ ಪ್ರಕೃತಿ,
ಬೆಂಕಿ ಹಚ್ಚುವುದು ವಿಕೃತಿ,
ಮನೆಯ ದೀಪ ಬೆಳಗುವುದು ಸಂಸ್ಕೃತಿ.



ಬಿಲ್ವಪತ್ರೆಯು ಶಿವಲಿಂಗದ ಮೇಲೆ ಬಿದ್ದುದರಿಂದ ಅವರು ನರಕ ಬಾಧೆಯಿಂದ ಪಾರಾಗಿ ಕೈಲಾಸ ವನ್ನು ಸೇರಿದರೆಂದು ಬಣ್ಣನೆ ಇದೆ.

**ವಿದೇಶಗಳಲ್ಲಿ ಶಿವೋಪಾಸನೆ :** ಭಾರತೀಯ ಸಂಸ್ಕೃತಿಯು ವಿಶ್ವವ್ಯಾಪಿಯಾಗುತ್ತಿದ್ದಂತೆಯೇ ಭಾರತೀಯರ ಶಿವೋಪಾಸನ ಪದ್ಧತಿಯು ವಿದೇಶ ಗಳಲ್ಲಿ ಪ್ರಚುರಗೊಂಡಿತು. ಆ ವಿದೇಶಿಯರೂ, ಈ ಪರಿಪಾಟವನ್ನು ತಮ್ಮದಾಗಿಸಿಕೊಂಡು ಇದರ ವಿಕಾಸಪಥದಲ್ಲಿ ಶ್ರದ್ಧಾಳುಗಳಾದರು. ಇದರ ಪರಿಣಾಮಗಳಲ್ಲಿ ಭೂಮಂಡಲದ ಮೂಲೆ ಮೂಲೆಗಳಲ್ಲಿ ಶಿವಾರಾಧನೆಯ ತನ್ನ ಅಸ್ತಿತ್ವವನ್ನು ಪಡೆದು ಬೆಳಗಿತು.

ಕಠ್ಮಂಡುವಿನಲ್ಲಿರುವ ಪಶುಪತಿನಾಥ ಮಂದಿರವು ನೇಪಾಲಿಯರಿಗೆ ಭಾರತದ ವಾರಾಣಾಸಿಯಷ್ಟು ಪವಿತ್ರವಾಗಿದೆ. ಈ ದೇವಾಲಯದಲ್ಲಿ ಮೂರೂವರೆ ಅಡಿ ಎತ್ತರದ ಶಿವಲಿಂಗವನ್ನು ಕಾಣಬಹುದು. ಇಲ್ಲಿನ ಪರ್ವತ ಶ್ರೇಣಿಗಳೆಲ್ಲ ಶಿವನ ಸಂಬಂಧವಾದ ಹೆಸರನ್ನೆ ಪಡೆದಿದೆ ಎಂಬುದಕ್ಕೆ ಕೈಲಾಸಪರ್ವತ, ಶಿವಪುರಿ ಪರ್ವತ, ಮಾಲಾ ಇತ್ಯಾದಿಗಳನ್ನು ಹೆಸರಿಸಬಹುದು.

ಶಿವಜಟಾಲಂಕೃತೆಯಾದ ಗಂಗೆಯ ಉಗಮಸ್ಥಾನವಿದು. ಶಿವನ ತಪಃಸ್ಥಳವೂ, ಶಿವಪಾರ್ವತಿಯರ ಕ್ರೀಡಾಸ್ಥಳವೂ ಆದ 'ನೇಪಾಳ' ಇಂದು ಶಿವೋಪಾಸನೆಗೆ ಹೆಚ್ಚಿನ ಮಹತ್ವವನ್ನು ಗಳಿಸಿದೆ. ಭಾರತೀಯರಿಗೆ ಅತ್ಯಂತ ಪವಿತ್ರವಾದ ಕೈಲಾಸ ಹಾಗೂ ಮಾನಸ ಸರೋವರಗಳು ಟಿಬೆಟ್ಟಿನಲ್ಲಿದೆ.

**ಶಿವಪಂಚಾಕ್ಷರಿಯ ಮಹತ್ವ:** ವಿದ್ಯೆಗಳಲ್ಲಿ ವೇದ ವಿದ್ಯೆ, ವೇದಗಳಲ್ಲಿ ರುದ್ರಾಧ್ಯಾಯದಲ್ಲಿ ಪಂಚಾಕ್ಷರಿ, ಪಂಚಾಕ್ಷರಿಯಲ್ಲಿ 'ಶಿವ' ಎಂಬ ಎರಡಕ್ಷರಗಳೂ ಪರಮ ಪವಿತ್ರ. ದೇವನನ್ನು ಸಾಕ್ಷಾತ್ಕರಿಸಿಕೊಳ್ಳುವುದೇ ಮಾನವನ ಮುಖ್ಯ ಗುರಿ. ಅದೇ ಪರಮ ಪುರುಷಾರ್ಥ ಅದೇ ಮೋಕ್ಷ.

ಇದಕ್ಕೆ ಸಾಧಕವಾದುದು ಪಂಚಾಕ್ಷರಿ ಮಂತ್ರ. ಇದು 'ಓಂ' ಪ್ರಣವದೊಡಗೂಡಿ ಷಡಾಕ್ಷರಿಯೆನಿಸಿದೆ. ಓಂಕಾರ ಪರಬ್ರಹ್ಮನನ್ನು ತಿಳಿಸುವ ಶಬ್ದ. ಅದರ ವಿವರಣೆಯೇ ಪಂಚಾಕ್ಷರಿ ಪರಮಾತ್ಮನ ಸರ್ವಜ್ಞತ್ವ, ಸರ್ವವ್ಯಾಪಕತ್ವ, ಸರ್ವಾಂತರ್ಯಾಮಿತ್ವವನ್ನು ಎಳೆ ಎಳೆಯಾಗಿ ಪ್ರತಿಪಾದಿಸುವ ಭಾಗವೇ ಸುಪ್ರಸಿದ್ಧ ರುದ್ರಾಧ್ಯಾಯ.

ಈ ಪಂಚಾಕ್ಷರಿ ಮಂತ್ರ ರಾಜಾಧಿರಾಜ, ಜ್ಞಾನನಿಧಿ, ಮೋಕ್ಷಕ್ಕೆ ದಾರಿದೀಪ. ಅವಿದ್ಯೆಯೆಂಬ ಸಮುದ್ರಕ್ಕೆ ಬಡಬಾಗ್ನಿ.

ಪಾಪರಾಶಿಗಳಿಗೆ ಕಾಡ್ಗಿಚ್ಚು. ಸಕಲಾಭೀಷ್ಟಗಳಿಗೂ ಕಾಮಧೇನು. ಸ್ತ್ರೀ-ಪುರುಷ ಭೇದವಿಲ್ಲದೆ ಸಕಲ ಮಾನವರೂ ಈ ಮಂತ್ರವನ್ನು ವಿಶೇಷವಾದ ದೀಕ್ಷಾದಿ ನಿಯಮಗಳಿಲ್ಲದೆ ವಿಧಿವಿಹಿತ ಕ್ರಮದಲ್ಲಿ ಸದ್ಗುರುಗಳಿಂದ ಉಪದೇಶ ಪಡೆದು ಅನುಷ್ಠಾನದಿಂದ ಜನ್ಮ ಸಾಫಲ್ಯವನ್ನು ಪಡೆಯಬಹುದು.



ದಕ್ಷಿಣ ಭಾರತದ ಸ್ವಯಂಭೂ ಪಂಚಶಿವಲಿಂಗಗಳು ಪಂಚತತ್ವಗಳ ಪ್ರತೀಕವಾಗಿ ಈ ಕ್ಷೇತ್ರಗಳಲ್ಲಿವೆ.

ಕಂಚಿ-ಏಕಾಂಬರೇಶ್ವರ (ಪೃಥ್ವಿ), ತಿರುವಣ್ಣಾಮಲೆ-ಅರುಣಾಚಲೇಶ್ವರ (ಅಗ್ನಿ), ಶ್ರೀರಂಗಂ-ಜಂಬುಕೇಶ್ವರ (ಜಲ), ಕಾಳಹಸ್ತಿ-ಶ್ರೀಕಾಳಹಸ್ತೇಶ್ವರ (ವಾಯು), ಚಿದಂಬರ-ನಟರಾಜ (ಆಕಾಶ).

ಶಿವನಾಮ ಪರಮ ಮಂಗಳಮಯ, ಸರ್ವದುಃಖನಾಶಕ, ಮಹಾಶಿವರಾತ್ರಿಯ ಶುಭ ಅವಸರದಲ್ಲಿ ಶ್ರದ್ಧಾತಿಶಯದಿಂದ 'ಓಂ ನಮಃ ಶಿವಾಯ' ಎಂಬ ಪಂಚಾಕ್ಷರಿ ಮಂತ್ರವನ್ನು ಜಪಿಸುತ್ತಾ ಜಗದೊಡೆಯನ ಕೃಪಾಪಾತ್ರರಾಗಲು ಶಿವರಾತ್ರಿ ಒಂದು ಪರ್ವ ಕಾಲ.

'ಶಿ' ಎಂದರೆ ಶಿಖೆಯಲ್ಲಿ ಪವಿತ್ರ ಗಂಗೆಯನ್ನು ಧರಿಸಿರುವ, 'ವ' ಅಂದರೆ ವರದಾತ ಕಲ್ಯಾಣಕಾರಕ ಮಹಾಶಕ್ತಿಶಾಲಿ ನಮ್ಮ 'ಶಿವ'. ಈಶ್ವರನನ್ನು ಸರ್ವೋತ್ತಮ ಗಾನಲೋಲನೆಂದೇ ಕರೆಯುವರು. ಸಿರಿಸಂಪದನಾದ ಈಶ್ವರ ಸಪ್ತಸ್ವರಗಳ ಸತ್‌ಶಕ್ತಿ.

ಶಿವಶಕ್ತಿಯಲ್ಲಿ ಅಜ್ಞಾನ-ಅಂಧಕಾರದ ಮೂಢನಂಬಿಕೆಗಳನ್ನು ಕಿತ್ತೊಗೆಯುವ ಅಗೋಚರ ಅದಮ್ಯ ದಿವ್ಯ ಶಕ್ತಿಯು ಅಡಗಿದೆ. ಜ್ಞಾನಿಗಳು ಹೇಳುವರು ಆರೋಗ್ಯವೇ ಭಾಗ್ಯವೆಂದು. ಒಳ್ಳೆಯ ಆರೋಗ್ಯಕ್ಕೆ ಬೆನ್ನು ಮೂಳೆಯೇ ಅತಿ ಮುಖ್ಯ. ಶರೀರದ ಹಿಂಭಾಗ ಬೆನ್ನೆಲುಬಿನ ನಾಡಿಗೆ 'ಬ್ರಹ್ಮನಾಡಿ' ಎಂದು ಹೆಸರು. ಈ ನಾಡಿನ ಅಗ್ರಭಾಗವೇ 'ಮೇರು'. ಈ ಮೇರುವಿನಲ್ಲಿ ಸಹಸ್ರದಳದ ಕಮಲಾಕಾರದ ಒಂದು ಚಕ್ರವಿದೆ. ಅದುವೇ 'ಮೇರು ಚಕ್ರ'. ಈ ಚಕ್ರದ ಮಧ್ಯದಲ್ಲಿರುವ ಸರ್ವಸಂಪನ್ನನಾದ ಸಚ್ಚಿದಾನಂದ ಶಕ್ತಿಗೆ 'ಪರಮೇಶ್ವರ' ನೆಂದು ಹೆಸರು. ಹೃದಯ ಕಮಲದ ಮಧ್ಯ ಬಿಂದುವಿನಿಂದ ಮೇಲೇರಿ 'ಸುಷಮ್ನಾನಾಡಿ'ಯ ಮೂಲಕ ಚಿಮ್ಮುವ ಕಾಂತಿಯುಳ್ಳ ದಿವ್ಯಜ್ಞಾನಮಯ ಅರಿವೆಂಬ ಪರಂ ಜ್ಯೋತಿಯೇ ಬ್ರಹ್ಮಾನಂದಮಯವಾದ ಸಚ್ಚಿದಾನಂದ ಮೂರ್ತಿ. ಇದೇ 'ಜ್ಯೋತಿರ್ಲಿಂಗ' (ಅರಿವು-ಜ್ಞಾನ ಸಿದ್ಧಿ) ॐ

## ಸಮೃದ್ಧಿ ಸುಜ್ಞಾನ

ಮನೆಗಿಂತ ಬಾಗಿಲು ಚಿಕ್ಕದು, ಬಾಗಿಲಿಗಿಂತ ಕಿಟಕಿ ಚಿಕ್ಕದು, ಕಿಟಕಿಗಿಂತ ಬೀಗ ಚಿಕ್ಕದು, ಬೀಗಕ್ಕಿಂತ ಕೀ ಚಿಕ್ಕದು, ಆ ಒಂದು ಚಿಕ್ಕ ಬೀಗದ ಕೀ, ಅಷ್ಟು ದೊಡ್ಡ ಮನೆ ಬಾಗಿಲು ತೆಗೆಯಬಹುದು ಅಂದರೆ, ಜೀವನದಲ್ಲಿ ಎಷ್ಟೇ ದೊಡ್ಡ ಸಮಸ್ಯೆ ಬಂದರೂ. "ಆತ್ಮವಿಶ್ವಾಸ" ಎನ್ನುವ ಕೀ ಒಂದಿದ್ದರೆ ಸಾಕು.

# ಜಿ. ಎಸ್. ಶಿವರುದ್ರಪ್ಪ



ಜಿ. ಎಸ್. ಶಿವರುದ್ರಪ್ಪ ರವರು ಫೆಬ್ರವರಿ 7, 1926 ರಂದು ಶಿವಮೊಗ್ಗ ಜಿಲ್ಲೆಯ ಶಿಕಾರಿಪುರದಲ್ಲಿ ಹುಟ್ಟಿದ ಜಿ. ಎಸ್. ಶಿವರುದ್ರಪ್ಪ ಈ ನಾಡಿನಲ್ಲಿ ವ್ಯಾಪಕವಾಗಿ ಸಂಚರಿಸಿದ್ದವರು. ಪ್ರವಾಸ ಪ್ರೀತಿಯ ಜೀಯೆಸ್ಸೆಸ್ ಈ ಸುತ್ತುವಿಕೆಯಿಂದ ಅತಿಯಾದ ಬಹುಶ್ರುತತೆಯನ್ನು, ಸಮಚಿತ್ತವನ್ನು, ಜನಸಂಪರ್ಕವನ್ನು ಪಡೆದಿದ್ದರು. ಸೃಜನ, ವಿಮರ್ಶೆ, ಮೀಮಾಂಸೆ, ಅಧ್ಯಯನ, ಅಧ್ಯಾಪನ, ಆಡಳಿತ, ಸಂಘಟನೆ ಈ ಮುಂತಾದ ಸಾಂಸ್ಕೃತಿಕ ನೆಲೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡು, ಕನ್ನಡ ಸಂಸ್ಕೃತಿಯ ಚಲನಶೀಲತೆಗೆ ತಮ್ಮ ಕೊಡುಗೆ ನೀಡುತ್ತ ಬಂದ ಮುಖ್ಯರಲ್ಲಿ ಒಬ್ಬರಾಗಿದ್ದಾರೆ. ಡಾ. ಜಿ. ಎಸ್. ಶಿವರುದ್ರಪ್ಪನವರು ಗೋವಿಂದ ಪೈ, ಕುವೆಂಪು ನಂತರ ಮೂರನೆಯ ರಾಷ್ಟ್ರಕವಿಯಾಗಿ ನಮ್ಮ ಕನ್ನಡಿಗರ ಹೆಮ್ಮೆಯಾಗಿದ್ದಾರೆ.

ಮೈಸೂರು ವಿಶ್ವವಿದ್ಯಾಲಯ ಸ್ಥಾಪನೆಯಾಗಿ, ದೂರ–ದೂರದ ಹಳ್ಳಿಗಾಡುಗಳಲ್ಲಿ ಓದಿನ ಸೌಲಭ್ಯಗಳಿಗಾಗಿನಿಧಾನ ವಾಗಿ ತೆರೆದುಕೊಳ್ಳುತ್ತಿದ್ದ ಜನಸಮುದಾಯದಿಂದ ಬಂದು ಶ್ರಮ, ನಿಷ್ಠೆ, ಹಾಗೂ ಪ್ರತಿಭೆಗಳಿಂದ ರಂಗದಲ್ಲಿ ಮುಖ್ಯರಾಗತೊಡಗಿದ್ದರು, ಹಾಗೆ ತೊಡಗಿ ಯಶಸ್ಸು ಪಡೆದ ಮೊದಲ ತಲೆಮಾರಿಗೆ ಜೀಯೆಸ್ಸೆಸ್ ಸೇರುತ್ತಾರೆ. ಕನ್ನಡ ನವೋದಯದ ಮುಂದಾಳುಗಳು ರೂಪಿಸಿದ ಹಾದಿಯಲ್ಲಿ ನಡೆದು ಸಮರ್ಥ ಉತ್ತರಾಧಿಕಾರಿಗಳು ಎಂದು ಸಾಬೀತು ಮಾಡಿದ್ದಾರೆ.

ಶಿಕ್ಷಕ ತಂದೆಯೊಡನೆ ಸುತ್ತುತ್ತ ಊರೂರುಗಳಲ್ಲಿ ಶಿಕ್ಷಣ ಪಡೆದು ಮೈಸೂರು ಸೇರಿ ವೆಂಕಣ್ಣಯ್ಯ, ಕುವೆಂಪು ಅವರ ಒತ್ತಾಸೆಯಲ್ಲಿ ಬಿ.ಎ (ಆನರ್ಸ್), ಎಂ.ಎ ಹಾಗೂ ಪಿ.ಎಚ್.ಡಿ ಗಳನ್ನು ಪಡೆದರು. ಮಹಾರಾಜ ಕಾಲೇಜು ಆಗ ಟಂಕಸಾಲೆಯಲ್ಲಿ ಪ್ರಮಾಣೀಕರಣಗೊಂಡರೆ ಮಾತ್ರ ಸಾಹಿತ್ಯಕ ವ್ಯಕ್ತಿತ್ವಕ್ಕೆ ಚಲಾವಣೆ ಸಿಗುವಂತೆ ಇದ್ದ ಕಾಲವದು. ವಿಶ್ವವಿದ್ಯಾಲಯದ ಹೊರಗಿದ್ದವರೂ ಒಂದಲ್ಲ ಒಂದು ಬಗೆಯಲ್ಲಿ ಈ ಟಂಕಸಾಲೆಯ ವ್ಯಾಪ್ತಿಯ ಒಳಗಾಗಿಯೇ ಇದ್ದರೆಂಬುದಕ್ಕೆ ಪ್ರಬುದ್ಧ ಕರ್ನಾಟಕ ಹಾಗೂ ಮಹಾರಾಜ ಕಾಲೇಜು ಕರ್ನಾಟಕ ಸಂಘ ಪ್ರಕಟಿಸಿದ ಗ್ರಂಥಗಳ ಪುಟಗಳು ಸಾಕ್ಷಿಯಾಗಿವೆ. ಜೀಯೆಸ್ಸೆಸ್ ಅಲ್ಲಿ ಕವಿಯಾಗುವ ಹಂಬಲಕ್ಕೆ ಪುಷ್ಟಿ ಪಡೆದರು. ಮಾಸ್ತಿಯವರು 'ಜೀವನ'ದಲ್ಲಿ ಈ ಕವಿಯನ್ನು ಮೊದಲು ಅನಾವರಣಗೊಳಿಸಿದರಾದರೂ ಜೀಯೆಸ್ಸೆಸ್ ಹಸಿರು ಬಾವುಟ ಕಂಡದ್ದು ಕುವೆಂಪು ಅವರಲ್ಲಿ. ಈ ಮಹಾರಾಜ ಕಾಲೇಜು ಇವರೊಳಗಿನ ವಿಮರ್ಶಕ ಮೀಮಾಂಸಕರನ್ನೂ ಬೆಳೆಸಿತು.

ಜೀಯೆಸ್ಸೆಸ್ ಮೈಸೂರು ವಿಶ್ವವಿದ್ಯಾಲಯದ ವಿವಿಧ ಕಾಲೇಜುಗಳಲ್ಲಿ (ದಾವಣಗೆರೆ, ಶಿವಮೊಗ್ಗ, ಮೈಸೂರು) ಅಧ್ಯಾಪಕರಾಗಿ ವೃತ್ತಿಜೀವನವನ್ನು ಆರಂಭಿಸಿದರು. ಹೈದರಾಬಾದ್ ಉಸ್ಮಾನಿಯ ವಿಶ್ವವಿದ್ಯಾಲಯದ ಕನ್ನಡ ವಿಭಾಗದ ಮುಖ್ಯರಾಗಿ ಕೆಲಸಮಾಡಿ, ಮರಳಿ ಮಹಾರಾಜ ಕಾಲೇಜಿಗೆ ಬಂದು, ಆನಂತರ 1966 ರಲ್ಲಿ ಬೆಂಗಳೂರು ವಿಶ್ವವಿದ್ಯಾಲಯ ಸೇರಿ, 1970 ರಿಂದ ಕನ್ನಡ ಅಧ್ಯಯನ ಕೇಂದ್ರದ ಮುಖ್ಯಸ್ಥರಾದರು. ಇಲ್ಲಿ ಎರಡು ದಶಕಗಳ ಕಾಲ ಕಾವ್ಯ, ಕಾವ್ಯಮೀಮಾಂಸೆಗಳ ಪಾಠ ಹೇಳಿ ಕನ್ನಡದ ಅತೀ ಪ್ರಭಾವಶಾಲಿ ಅಧ್ಯಾಪಕರ ಪರಂಪರೆಗೆ ಜೀಯೆಸ್ಸೆಸ್ ಸೇರುತ್ತಾರೆ. ಪ್ರಾಚೀನ ಹಾಗೂ ಆಧುನಿಕ ಕನ್ನಡ ಕಾವ್ಯ, ಇಂಗ್ಲಿಷ್ ರೋಮಾಂಟಿಕ್ ಕಾವ್ಯ, ಐರೋಪ್ಯ ನವ್ಯಕಾವ್ಯ, ಪಾಶ್ಚಾತ್ಯ ಮಹಾಕಾವ್ಯ ಹಾಗೂ ತೌಲನಿಕ ಕಾವ್ಯ ಮೀಮಾಂಸೆ ಇವು ಅವರು ಪಾಠ ಹೇಳಿದ ಮುಖ್ಯ ವಲಯಗಳು. ಎಲ್ಲ

ಕಾಲದ, ಎಲ್ಲ ದೇಶದ ಕವಿಗಳನ್ನು ಕನ್ನಡದ ಸಂವೇದನೆಯ ಮೂಲಕವೇ ಗ್ರಹಿಸಬಯಸುವ, ಪರೋಕ್ಷವಾಗಿ ಒಂದು ಬಗೆಯ ಶುದ್ಧ ಕಾವ್ಯವನ್ನು ಹುಡುಕುವ ವಿಧಾನವನ್ನು ಬಳಸಿದರು. ಅವರ ಪಾಠಗಳು ಪೂರ್ವಸಿದ್ಧತೆ, ವಿವರಗಳ ಮಂಡನೆ, ಚಿಂತನಶೀಲತೆ, ಸಾಮಯಿಕ ಒಳನೋಟಗಳನ್ನು ಒಳಗೊಂಡಿರುವುದರ ಜೊತೆಗೆ ಹೊಸದನ್ನು ಅಳವಡಿಸಿಕೊಳ್ಳುವ, ಹೊಸದಾದುದಕ್ಕೆ ಪ್ರತಿಕ್ರಿಯಿಸುವ ಆಸಕ್ತಿಯಿಂದ ಕೂಡಿರುತ್ತಿದ್ದವು. ಅವರ ಪಾಠಗಳು ಅವರ ವಿದ್ಯಾರ್ಥಿಗಳನ್ನು ಚಿಂತನೆಗೆ ಹಚ್ಚಿ ಮೊಳೆತು ಬೆಳೆದಿವೆಯಾಗಿ, ಜೀಯೆಸ್ಸೆಸ್ ಪರೋಕ್ಷವಾಗಿ ತರಗತಿಯ ಹೊರಗೂ ಮೇಷ್ಟರಾಗಿದ್ದಾರೆ. ಅವರ ಹಲವಾರು ಶಿಷ್ಯರು ಕನ್ನಡ ವಿಮರ್ಶೆ ಮತ್ತು ಸಾಹಿತ್ಯಾಧ್ಯಯನದ ಕ್ಷೇತ್ರದ ಕೃಷಿಯಲ್ಲಿ ತೊಡಗಿದ್ದಾರೆ.

ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಕೇಂದ್ರದಲ್ಲಿ ನಿರ್ದೇಶಕರಾಗಿ ಮತ್ತು ಕರ್ನಾಟಕ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾಗಿ ಸಾಹಿತ್ಯ ಸಂಬಂಧದ ಚಟುವಟಿಕೆಗಳನ್ನು ಸಂಯೋಜಿಸಿ, ಸಂಘಟಿಸಿ, ನಿರ್ವಹಿಸಿ ಜೀಯೆಸ್ಸೆಸ್ ಹೆಸರಾಗಿದ್ದಾರೆ. ಕನ್ನಡ ವಿಮರ್ಶೆಯ ಬೆಳವಣಿಗೆಗೆ ಅವರು ಹಾಕಿಕೊಂಡ ಹಲವು ಯೋಜನೆಗಳನ್ನು ಕಾರ್ಯಗತ ಮಾಡಿದ್ದಾರೆ. 'ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ'ಯ ಸಂಪುಟಗಳು ಮತ್ತು 'ಸಾಹಿತ್ಯ ವಾರ್ಷಿಕ'ದ ಯೋಜನೆಗಳು ಅನನ್ಯವಾದವು. ಸಾಂಸ್ಥಿಕ ಪ್ರಯತ್ನದ ಸಾಹಿತ್ಯ ಚರಿತ್ರೆಯ ಯೋಜನೆಯಲ್ಲಿ ವಿವಿಧ ಚಿಂತನಾಕ್ರಮಗಳ ಮೇಳವನ್ನು 'ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ'ಯು ಸಾಧಿಸಿದರೆ, 'ಸಾಹಿತ್ಯ ವಾರ್ಷಿಕ' ದಾಖಲೆಯ ಜೊತೆಗೆ ವಿಮರ್ಶೆಯ ಬೆಳವಣಿಗೆಯ ದಿಕ್ಕನ್ನು ಕೂಡ ಸಾಧಿಸಲು ಸಮರ್ಥವಾಗಿದೆ. ಇಂಥ ಪ್ರಯತ್ನಗಳನ್ನು ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾಗಿಯೂ ಜೀಯೆಸ್ಸೆಸ್ ಮುಂದುವರೆಸಿ ಯಶಸ್ಸು ಸಾಧಿಸಿದ್ದರು.

ಜೀಯೆಸ್ಸೆಸ್ ಅವರು ಕನ್ನಡ ಸಾಹಿತ್ಯ ಪಂಡಿತರಿಗೆ, ಸಾಹಿತ್ಯ ಚಿಂತಕರಿಗೆ, ಸಾಹಿತ್ಯ ಪ್ರಿಯರಿಗೆ ಎಷ್ಟು ಪ್ರಿಯರೋ, ಜನಸಾಮಾನ್ಯರಿಗೆ ಕೂಡ ಬಲುಪ್ರಿಯರು. ಅವರ ಭಾವಗೀತೆಗಳು ಹಲವಾರು ಪ್ರಮುಖ ಹಾಡುಗಾರರ, ಜನಸಾಮಾನ್ಯರ ಧ್ವನಿಗಳಲ್ಲಿ ಹಲವಾರು ದಶಕಗಳಿಂದ ನಲಿಯುತ್ತ ಸಾಗಿದೆ. 'ಎದೆ ತುಂಬಿ ಹಾಡಿದೆನು ಅಂದು ನಾನು' ಹಾಡನ್ನು ಅನುಭವಿಸದ ಕನ್ನಡಿಗನೇ ಇಲ್ಲ. ಎಲ್ಲ ಮಾದರಿಯ ಕವಿತೆಗಳಲ್ಲಿ, ಹಾಡುಗಳಲ್ಲಿ ಅದು ನಿರಂತರವಾಗಿ ಜನರ ನಾಲಿಗೆಯಲ್ಲಿ, ಜನಮಾನಸದಲ್ಲಿ ಬೆಳಗುತ್ತಿದೆ. 'ಉಡುಗಣವೇಷ್ಟಿತ ಚಂದ್ರ ಸುಶೋಭಿತ ನೀಲಾಂಬರ ಸಂಚಾರಿ', 'ಎಲ್ಲೋ ಹುಡುಕಿದೆ ಇಲ್ಲದ ದೇವರ ಕಲ್ಲು ಮಣ್ಣುಗಳ ಗುಡಿಯೊಳಗೆ', 'ಕಾಣದ ಕಡಲಿಗೆ ಹಂಬಲಿಸಿದೆ ಮನ', 'ಯಾರವರು ಯಾರವರು ಯಾರವರು ಯಾರೋ', 'ಆಕಾಶದ ನೀಲಿಯಲ್ಲಿ ಚಂದ್ರತಾರೆ ತೊಟ್ಟಿಲಲ್ಲಿ', 'ವೇದಾಂತಿ ಹೇಳಿದನು ಹೊನ್ನೆಲ್ಲ ಮಣ್ಣು ಮಣ್ಣು', 'ಹಾಡು ಹಳೆಯದಾದರೇನು', 'ಯಾವುದೀ ಪ್ರವಾಹವೂ', 'ಬೆಳಗು ಬಾ ಹಣತೆಯನು', 'ನೀನು ಮುಗಿಲು ನಾನು ನೆಲ' ಹೀಗೆ ಅವರ ಭಾವಗೀತೆಗಳನ್ನು ಒಂದಾದ ಮೇಲೆ ಒಂದು ನೆನಪಿಸಿಕೊಳ್ಳುತ್ತಲೇ ಇರಬೇಕು ಎಂದೆನಿಸುತ್ತದೆ ಮಾತ್ರವಲ್ಲ ಆ ನೆನಪೇ ಒಂದು ಸವಿ ಪಯಣದ ಮೆಲುಕಿನಂತಿರುತ್ತದೆ. ಜೀಯೆಸ್ಸೆಸ್ ಕನ್ನಡಪರ ಚಳುವಳಿಗಳಲ್ಲಿ, ಕಾಳಜಿಗಳಲ್ಲಿ ಕೂಡಾ ತಮ್ಮನ್ನು ನಿರಂತರವಾಗಿ ತೊಡಗಿಸಿಕೊಂಡಿದ್ದವರು.

ಕನ್ನಡದ ಮುಖ್ಯಕವಿಗಳಾಗಿ ಜೀಯೆಸ್ಸೆಸ್ ಅರ್ಧ ಶತಮಾನಕ್ಕೂ ಹೆಚ್ಚು ಕಾಲದಿಂದ ಕಾವ್ಯರಚನೆ ಮಾಡಿದ್ದಾರೆ. ಕುವೆಂಪು ಮತ್ತು ಪು.ತಿ.ನ ಅವರ ಕಾವ್ಯರಚನೆಗಳಿಂದ ಬೇರೆ ಬೇರೆ ಬಗೆಯಲ್ಲಿ ಬೇರೆ ಬೇರೆ ಪ್ರಮಾಣಗಳಲ್ಲಿ ಪ್ರಭಾವಿತರಾಗಿ ಕವಿತೆಗಳನ್ನು ಬರೆಯತೊಡಗಿದ ಜೀಯೆಸ್ಸೆಸ್ ಮುಂದಿನ ಕನ್ನಡ ಕಾವ್ಯದ ಬೆಳವಣಿಗೆಯಲ್ಲಿ ಬೆರೆಯುತ್ತ ಬೆಳೆದರು. ನವೋದಯ, ನವ್ಯ, ಬಂಡಾಯಗಳೆಂಬ ಮಾರ್ಗಗಳು ಅವರ ಕಾವ್ಯರಚನೆಯನ್ನು ಪ್ರಭಾವಿಸಿವೆ. ಇವುಗಳ ಪ್ರಭಾವ ಏನೇ ಇದ್ದರೂ, ಜೀಯೆಸ್ಸೆಸ್ ಅವರ ಮುಖ್ಯ ಕವಿತೆಗಳಲ್ಲಿ ತುಂಬಿರುವುದು ಪ್ರಸಾದ ಗುಣ. ಇವರ ಕವನ ಸಮುದಾಯದ ಅಧಿಕತಮ ಕವಿತೆಗಳ ಸಾಧಾರಣ ಧರ್ಮವನ್ನು ಗಮನಿಸಿದರೆ ಕವಿ, ಕಾವ್ಯಶರೀರವನ್ನು, ಪದಸಂಯೋಜನೆಯನ್ನು, ಅರ್ಥವು ಓದುಗನಿಗೆ ಸಂವಹನಗೊಳಿಸುವ ಪಾರದರ್ಶಕ ಮಾಧ್ಯಮವನ್ನಾಗಿ ಬಳಸುತ್ತಿರುವುದು ಸ್ಪಷ್ಟಗೊಳ್ಳುತ್ತದೆ. ಕಾವ್ಯಶರೀರ 'ಅರ್ಥ'ವನ್ನು ಮುಚ್ಚಿಡಲು ರೂಪುಗೊಂಡುದಲ್ಲ. ಹಾಗೆಯೇ 'ಅರ್ಥ'ವನ್ನು ಗ್ರಹಿಸಿಕೊಳ್ಳಲೆಂದೇ ಕಾವ್ಯ ಶರೀರವನ್ನು ರೂಪಿಸುವ ನವ್ಯಕವಿಗಳ ಮಾದರಿಯೂ ಇವರದ್ದಲ್ಲ. ಕವಿ ತನ್ನ ಅನುಭವಕ್ಕೆ ದಕ್ಕಿದ ಭಾವಾರ್ಥಗಳನ್ನು

ಭಾಷಿಕವಾಗಿ ಮಂಡಿಸುತ್ತಾರೆ; ಹೀಗಾಗಿ ಇದೊಂದು ಬಗೆಯ ಧ್ಯಾನಿತ ಕಾವ್ಯ. ಹಾಗಾಗಿ ಕವಿ ಅನುಭವದ ಗ್ರಹಿಕೆಗೆ ಕಾವ್ಯ ಬಿಡುಗಡೆಯ ಮಾಧ್ಯಮವಾಗುತ್ತದೆ.

'ಸಾಮಗಾನ', 'ಚೆಲುವು–ಒಲವು', 'ದೇವಶಿಲ್ಪ', 'ದೀಪದ ಹೆಜ್ಜೆ', 'ಅನಾವರಣ', 'ತೆರೆದ ಬಾಗಿಲು', 'ಗೋಡೆ', 'ವ್ಯಕ್ತಮಧ್ಯ', 'ತೀರ್ಥವಾಣಿ', 'ಕಾರ್ತಿಕ', ಕಾಡಿನ ಕತ್ತಲಲ್ಲಿ', 'ಪ್ರೀತಿ ಇಲ್ಲದ ಮೇಲೆ', 'ಚಕ್ರಗತಿ' ಅವರ ಪ್ರಮುಖ ಕವನ ಸಂಕಲನಗಳು. ಜೀಯೆಸ್ಸೆಸ್ ತಮ್ಮ ಕವಿತೆಗಳಲ್ಲಿ ಎರಡು ಜಗತ್ತುಗಳಿಗೆ ಸ್ಪಂದಿಸುವ ಹೊಣೆ ಹೊರಲು ಸಿದ್ಧರಾಗುವುದು ಕಂಡುಬರುತ್ತದೆ. ಒಂದು ಜೀವಸಂಮೃದ್ಧ ಪ್ರಕೃತಿ; ಇನ್ನೊಂದು ಮಾನವ ಕೇಂದ್ರಿತ ಸಮಾಜ. ವಿಸ್ಮಯ ಉತ್ಸುಕತೆಗಳು ಅವರ ಕವಿತೆಗಳ ಪ್ರಧಾನ ಭಾವಗಳಾಗುತ್ತವೆ. ಪ್ರಕೃತಿಯ ನಿಯತ ಲಯಗಳು ಕವಿಗೆ ಸದಾ ಆಕರ್ಷಣೆಯನ್ನು ಉಂಟುಮಾಡಿವೆ. ಇನ್ನೊಂದು ನೆಲೆಯಲ್ಲಿ ನಿರೂಪಕ ಸಾಮಾಜಿಕ ಹೊಣೆಗಾರಿಕೆಯನ್ನು ಪಡೆದುಕೊಳ್ಳುತ್ತಾನೆ. ಆವರಣದ ಮಾನವ ಜಗತ್ತಿನ ವೈಸಾದೃಶ್ಯಗಳನ್ನು, ಲಯರಾಹಿತ್ಯವನ್ನು, ಅಪಶ್ರುತಿಗಳನ್ನು ಗ್ರಹಿಸಿ ಅವುಗಳನ್ನು ತನ್ನ ಕವಿತೆಗಳಲ್ಲಿ ಮಂಡಿಸುವುದು ಈ ನಿರೂಪಕನ ಹೊಣೆ.

'ಕಾಲ' ಮತ್ತು 'ಮನುಷ್ಯ' ತಮ್ಮ ಕಾವ್ಯದ ಕೇಂದ್ರಗಳು ಎಂದು ಜೀಯೆಸ್ಸೆಸ್ ಹೇಳಿರುವುದುಂಟು. ನಿರಂತರವಾದದ್ದು ಹಾಗೂ ಅದರ ಒಂದು ಘಟಕದಲ್ಲಿ ನಿಜವಾಗವಂಥದ್ದು ಇವೆರಡೂ, ಅತೀತವಾದದ್ದು ಅನ್ಯವಲ್ಲ, ಅದು ಲೋಕವೇ ಎಂಬ ನೆಲೆಯಲ್ಲಿರುವ ಇವರ ಕಾವ್ಯ ಲೋಕಪ್ರೀತಿಯದು.

'ಪರಿಶೀಲನದಿಂದ' ಮೊದಲಾಗಿ 'ಗತಿಬಿಂಬ', 'ನವೋದಯ', 'ಅನುರಣನ', 'ಪ್ರತಿಕ್ರಿಯೆ', ಮತ್ತು 'ಬೆಡಗು' ವರೆಗಿನ ಅವರ ವಿಮರ್ಶೆಯ ಸಂಕಲನಗಳು ಪ್ರಾಚೀನ, ಮಧ್ಯಕಾಲೀನ ಹಾಗೂ ಆಧುನಿಕ ಸಾಹಿತ್ಯ ಕೃತಿಗಳ ಬಗೆಗೆ ಸಮರ್ಥ ಒಳನೋಟಗಳನ್ನು ನೀಡುತ್ತವೆ. ಕನ್ನಡ ನವೋದಯ ವಿಮರ್ಶೆಯ ವಿಚಾರಮೂಲವಾದಿ ಆಕೃತಿಗಳನ್ನು ಇಡಿಯಾಗಿ ಕನ್ನಡ ಸಾಹಿತ್ಯ ಪರಂಪರೆ ಮತ್ತು ಸಮಕಾಲೀನ ಕಾವ್ಯಕ್ಕೆ ಸಮರ್ಥವಾಗಿ ಅನ್ವಯಿಸುವ ಜೀಯೆಸ್ಸೆಸ್ ಅವರ 'ಸೌಂದರ್ಯ ಸಮೀಕ್ಷೆ' ಮಹಾಪ್ರಬಂಧ ಅವರ ವಿಮರ್ಶಾ ಪ್ರಯತ್ನದ ಪ್ರಮುಖ ಹಂತ. ಅವರ 'ಸೌಂದರ್ಯ ಸಮೀಕ್ಷೆ'ಯಲ್ಲಿ ಕಾವ್ಯಗಳಲ್ಲಿ, ಕೃತಿಭಾಗಗಳಲ್ಲಿ ಕಂಡು ಬರುವ 'ಲೋಕಾನುಭವ ಪರಿವರ್ತನೆ'ಯನ್ನು ವ್ಯಾಖ್ಯಾನಿಸುವ ಬಗೆ ಸಾಹಿತ್ಯಾಭ್ಯಾಸಿಗಳಿಗೆ ಈಗಲೂ ಸಾಹಿತ್ಯಾಧ್ಯಯನಕ್ಕೆ ಪ್ರವೇಶವನ್ನು, ಸಾಹಿತ್ಯಾಭಿರುಚಿಗೆ ಮಾದರಿಯನ್ನು ಒದಗಿಸಬಲ್ಲದು. ತಾತ್ವಿಕವಾಗಿ ಕನ್ನಡ ಕಾವ್ಯಪರಂಪರೆಯನ್ನು ವ್ಯಾಖ್ಯಾನಿಸುವ ಅವರ ಇನ್ನೆರಡು ಪ್ರಯತ್ನಗಳೆಂದರೆ 'ಕನ್ನಡ ಸಾಹಿತ್ಯ ಸಮೀಕ್ಷೆ' ಮತ್ತು 'ಕನ್ನಡ ಕವಿಗಳ ಕಾವ್ಯ ಕಲ್ಪನೆ'. ಕನ್ನಡ ಸಾಹಿತ್ಯ ಮೀಮಾಂಸೆಯ ಚೌಕಟ್ಟನ್ನು ರಚಿಸಲು ಬೇಕಾದ ಮೂಲಭೂತ ಅಂಶಗಳು ಈ ಕೃತಿಗಳಲ್ಲಿ ಚರ್ಚಿತವಾಗಿವೆ.

'ಮಹಾಕಾವ್ಯ ಸಮೀಕ್ಷೆ' ಗ್ರಂಥದಲ್ಲಿ ಭಾರತೀಯ ಮತ್ತು ಪಾಶ್ಚಾತ್ಯ ಮಹಾಕಾವ್ಯ ಸಂಬಂಧ ತತ್ವಗಳನ್ನು ತೌಲನಿಕವಾಗಿ ವಿವೇಚಿಸಲಾಗಿದೆ. ಇಂಥ ಹೋಲಿಕೆಯ ಅಧ್ಯಯನವನ್ನು ಸಾಹಿತ್ಯ ತತ್ವಗಳ, ತಾತ್ವಿಕ ಪರಿಕಲ್ಪನೆಗಳ ನೆಲೆಯಲ್ಲಿ ಬಳಸಿ ಬರೆದ ಲೇಖನಗಳ ಸಂಕಲನ, 'ಕಾವ್ಯಾರ್ಥ ಚಿಂತನ'. ಜೀಯೆಸ್ಸೆಸ್ ಅವರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿಯ ಪುರಸ್ಕಾರವನ್ನು ತಂದು ಕೊಟ್ಟ ಕೃತಿ ಇದು.

ಇಷ್ಟೆಲ್ಲಾ ಬರಹಗಳ ನಡುವೆ ಜೀಯೆಸ್ಸೆಸ್ ಮೂರು ಪ್ರವಾಸ ಕಥನಗಳನ್ನು (ಮಾಸ್ಕೋದಲ್ಲಿ ಇಪ್ಪತ್ತೆರಡು ದಿನ, ಗಂಗೆಯ ಶಿಖರಗಳಲ್ಲಿ ಮತ್ತು ಅಮೆರಿಕದಲ್ಲಿ ಕನ್ನಡಿಗ), ಒಂದು ಜೀವನಚಿತ್ರವನ್ನು (ಕರ್ಮಯೋಗಿ) ಹಾಗೂ ಆತ್ಮಕಥನ ಭಾಗವನ್ನು (ಚತುರಂಗ) ಬರೆದಿದ್ದಾರೆ. ಪ್ರವಾಸಕಥನಗಳು ಸಮೃದ್ಧ ವಿವರಗಳ ಜೊತೆಗೆ ಸಂವೇದನಾಶೀಲವಾದ ಮನಸ್ಸಿನ ತುಡಿತಗಳನ್ನು ಒಳಗೊಂಡ ಪ್ರಮುಖ ಬರಹವಾಗಿದೆ. 'ಕರ್ಮಯೋಗಿ' ಸಿದ್ಧರಾಮನನ್ನು ಕುರಿತು ಬರೆದ ಜೀವನಚಿತ್ರ. ಕನ್ನಡ ಕಾವ್ಯಗಳನ್ನು, ಅವುಗಳ ಕಥನವನ್ನು ಆಧುನಿಕ ನುಡಿಕಟ್ಟಿನಲ್ಲಿ ಹೇಳುವ ಪ್ರಯತ್ನಗಳಲ್ಲಿ ಇದು ಒಂದು. 'ಚತುರಂಗ'ದಲ್ಲಿ ತಮ್ಮ ಜೀವನದ ಬೇರೆಬೇರೆ ಹಂತಗಳನ್ನು, ನೆಲೆಗಳನ್ನು ಗಮನಿಸಿ ಮುಖ್ಯವಾದ ವಿವರಗಳನ್ನು ಬಳಸಿ ಒಂದು ಆತ್ಮಕಥಾನಕವನ್ನು ಬರೆದಿದ್ದಾರೆ.

# ದ್ವಿದಳ ಧಾನ್ಯಗಳು



2019 ರಲ್ಲಿ, ಜನರಲ್ ಅಸೆಂಬ್ಲಿ ಫೆಬ್ರವರಿ 10 ಅನ್ನು ವಿಶ್ವ ದ್ವಿದಳ ಧಾನ್ಯಗಳ ದಿನವೆಂದು ಘೋಷಿಸಿತು. ದ್ವಿದಳ ಧಾನ್ಯಗಳ ಮಹತ್ವದ ಬಗ್ಗೆ ಜಾಗೃತಿ ಮೂಡಿಸಲು 2019 ರಿಂದ ವಿಶ್ವಸಂಸ್ಥೆಯು ಘೋಷಿಸಿದಂತೆ ಫೆಬ್ರವರಿ 10 ಅನ್ನು ಪ್ರತಿ ವರ್ಷ "ವಿಶ್ವ ದ್ವಿದಳ ಧಾನ್ಯಗಳ ದಿನ" ಎಂದು ಆಚರಿಸಲಾಗುತ್ತದೆ. ಈ ದಿನವು ಪ್ರಪಂಚದಾದ್ಯಂತದ ಜನಸಂಖ್ಯೆಯ ಹಿಂದುಳಿದ ವರ್ಗದ ನಡುವೆ ಈ ಪೌಷ್ಟಿಕಾಂಶದ ಶಕ್ತಿ ಕೇಂದ್ರಕ್ಕೆ ಹೆಚ್ಚಿನ ಪ್ರವೇಶದ ಅಗತ್ಯವನ್ನು ತೋರಿಸುತ್ತದೆ. ಈ ದಿನದ ಆಚರಣೆಯು ವಿಶ್ವಸಂಸ್ಥೆಯ 2030 ರ ಸುಸ್ಥಿರ ಅಭಿವೃದ್ಧಿಯ ಕಾರ್ಯಸೂಚಿಯ ಕೆಲವು ಗುರಿಗಳನ್ನು ಸಾಧಿಸುವಲ್ಲಿ ದ್ವಿದಳ ಧಾನ್ಯಗಳು ಎಂದು ಕರೆಯಲ್ಪಡುವ ನಿರ್ಣಾಯಕ ಪಾತ್ರದ ಮೇಲೆ ಬೆಳಕು ಚೆಲ್ಲುತ್ತದೆ. ವಿಶೇಷವಾಗಿ ಸಮಾಜದ ಅಂಚಿನಲ್ಲಿರುವ ವರ್ಗಕ್ಕೆ ಆಹಾರ ಮತ್ತು ಪೌಷ್ಟಿಕಾಂಶದ ಭದ್ರತೆಯನ್ನು ಸಾಧಿಸುವಲ್ಲಿ ಬೇಳೆಕಾಳುಗಳ ಪೌಷ್ಟಿಕಾಂಶದ ಪ್ರಾಮುಖ್ಯತೆಯನ್ನು ಈ ದಿನವು ಎತ್ತಿ ತೋರಿಸುತ್ತದೆ.

**ಬೇಳೆಕಾಳುಗಳು ಏಕೆ ಸುಸ್ಥಿರ ಪೌಷ್ಟಿಕಾಂಶದ ಶಕ್ತಿ ಕೇಂದ್ರವಾಗಿದೆ?**

ದ್ವಿದಳ ಧಾನ್ಯಗಳು ಪಾಕಶಾಲೆಯ ಉದ್ದೇಶಗಳಿಗಾಗಿ ದ್ವಿದಳ ಧಾನ್ಯಗಳ ಬೆಳೆಗಳ ಕೃಷಿಯಿಂದ ಪಡೆದ ಬೀಜಗಳಾಗಿವೆ. ಈ ಬೀಜಗಳು ಪೋಷಕಾಂಶಗಳ ಬಂಡಲ್ ಆಗಿದ್ದು ಮುಖ್ಯವಾಗಿ ಪ್ರೋಟೀನ್‌ಗಳು ಆರೋಗ್ಯಕರ ಮತ್ತು ಸಮತೋಲಿತ ಆಹಾರಕ್ಕಾಗಿ ನಿರ್ಣಾಯಕವಾಗಿವೆ. ಭಾರತದಂತಹ ದೇಶದಲ್ಲಿ, ಬೇಳೆಕಾಳುಗಳು ಪಾಕಪದ್ಧತಿಯ ಅವಿಭಾಜ್ಯ ಅಂಗವಾಗಿದ್ದು, ಆನುವಂಶಿಕ ಮತ್ತು ಜಾತಿಗಳ ಮಟ್ಟದಲ್ಲಿ ಮತ್ತು ಪಾಕಶಾಲೆಯ ಮಟ್ಟದಲ್ಲಿ ಅಪಾರ ವೈವಿಧ್ಯತೆಯನ್ನು ಹೊಂದಿದೆ. ಭಾರತವು ವಿವಿಧ ದ್ವಿದಳ ಧಾನ್ಯಗಳಿಗೆ ನೆಲೆಯಾಗಿದೆ, ಮುಖ್ಯವಾಗಿ ಬೀನ್ಸ್, ಮಸೂರ, ಬಟಾಣಿ, ಮತ್ತು ದೈನಂದಿನ ಆಹಾರದ ಭಾಗವಾಗಿದೆ. ಸಸ್ಯಾಹಾರಿ ಪ್ರೋಟೀನ್‌ನ ಪ್ರಮುಖ ಮೂಲವಾಗಿರುವುದರ ಹೊರತಾಗಿ, ಬೇಳೆಕಾಳುಗಳು ಸಾರಜನಕ ಸ್ಥಿರೀಕರಣದ ಮೂಲಕ ಮಣ್ಣಿನ ಆರೋಗ್ಯವನ್ನು ಸುಧಾರಿಸಲು ಸಹಾಯ ಮಾಡುತ್ತದೆ, ಹೀಗಾಗಿ ಕೃಷಿ ವ್ಯವಸ್ಥೆಯನ್ನು ಹೆಚ್ಚು ಉತ್ಪಾದಕ ಮತ್ತು ಕಾರ್ಯಸಾಧ್ಯವಾಗುವಂತೆ ಮಾಡಲು ಸಹಾಯ ಮಾಡುತ್ತದೆ. ಹಸಿರು ಗೊಬ್ಬರದ ಬೆಳೆಗಳು ಅಥವಾ ಅಲ್ಪಾವಧಿಯ ಬೆಳೆಗಳಂತಹ ಅವರ ವೈವಿಧ್ಯಮಯ ಪಾತ್ರಗಳು ಹೆಚ್ಚುವರಿ ಆದಾಯದ ಉತ್ಪಾದನೆಯೊಂದಿಗೆ ಆರೋಗ್ಯಕರ ಮಣ್ಣನ್ನು ಪಡೆಯಲು ರೈತ ಸಮುದಾಯಕ್ಕೆ ಸಹಾಯ ಮಾಡುತ್ತದೆ.

ಸುಸ್ಥಿರ ಕೃಷಿ ಆಹಾರ ವ್ಯವಸ್ಥೆಗಳಿಗೆ ಅಗತ್ಯವಾದ ಜೀವನೋಪಾಯದ ಅವಕಾಶಗಳು ಮತ್ತು ಇಕ್ವಿಟಿಯನ್ನು ಸೃಷ್ಟಿಸಲು ಬೇಳೆಕಾಳುಗಳು ಹೇಗೆ ಕೊಡುಗೆ ನೀಡುತ್ತವೆ ಎಂಬುದನ್ನು ವಿಶ್ವಸಂಸ್ಥೆಯು ಪ್ರತಿಬಿಂಬಿಸುತ್ತದೆ. ಬೇಳೆಕಾಳುಗಳು ಗ್ರಾಮೀಣ ಪ್ರದೇಶದ ಮಹಿಳೆಯರು ಮತ್ತು ಕೃಷಿಯಲ್ಲಿ ತೊಡಗಿರುವ ಯುವಕರನ್ನು ಸಹ ನೇಮಿಸಿಕೊಳ್ಳುತ್ತವೆ. ಇದಲ್ಲದೆ, ದ್ವಿದಳ ಧಾನ್ಯಗಳು ಹವಾಮಾನ-ಸ್ಥಿತಿಸ್ಥಾಪಕತ್ವದ ಹೆಚ್ಚುವರಿ ಪ್ರಯೋಜನವನ್ನು ಹೊಂದಿ ಬರ ಒತ್ತಡ ಮತ್ತು ಕಡಿಮೆ ಇಂಗಾಲ ಹಾಗೂ ನೀರಿನ ಹೆಜ್ಜೆಗುರುತನ್ನು ನೀಡುವ ಕೊಳೆತ ಮಣ್ಣಿನಲ್ಲಿ ಸುಲಭವಾಗಿ ಬದುಕಬಲ್ಲವು. ಒಟ್ಟಾರೆಯಾಗಿ, ದ್ವಿದಳ ಧಾನ್ಯಗಳು ಹವಾಮಾನ-ಸ್ಥಿತಿಸ್ಥಾಪಕ, ಪೌಷ್ಟಿಕಾಂಶದ ದಟ್ಟವಾಗಿರುತ್ತದೆ; ಜೀವನೋಪಾಯದ ಮೂಲ, ಬೆಳೆಸಲು ಮತ್ತು ಸಂಗ್ರಹಿಸಲು ಸುಲಭ ಮತ್ತು ಮಣ್ಣಿನ ಸೂಕ್ಷ್ಮಜೀವಿಯ ಆರೋಗ್ಯವನ್ನು ಹೆಚ್ಚಿಸಲು ಸಹಾಯ ಮಾಡುತ್ತದೆ, ಇದು ಸುಸ್ಥಿರ ಆಹಾರ ವ್ಯವಸ್ಥೆಗೆ ಕೊಡುಗೆ ನೀಡುತ್ತದೆ.

**ಮನೆ ಮದ್ದು :**

ಒಂದು ಹನಿ ಕಪ್ಪು ಎಳ್ಳಿನ ಎಣ್ಣೆಯನ್ನು ಕಣ್ಣಿಗೆ ಹಚ್ಚುವುದರಿಂದ ಕಣ್ಣುಗಳು ಆರೋಗ್ಯವಾಗಿರುತ್ತವೆ.

**ಪೋಷಣೆ, ಜೀವನೋಪಾಯ ಮತ್ತು ಕೃಷಿ ಪರಿಸರ ವ್ಯವಸ್ಥೆಯನ್ನು ಉಳಿಸಿಕೊಳ್ಳುವ ಮಾರ್ಗ**

ಪೋಷಣೆ ಮತ್ತು ಜೀವನೋಪಾಯದಲ್ಲಿ ಬೇಳೆಕಾಳುಗಳ ಪ್ರಾಮುಖ್ಯತೆಯನ್ನು ಗುರುತಿಸಿ, 'ದ್ವಿದಳ ಧಾನ್ಯಗಳ ಗ್ರಾಮ ಕಾರ್ಯಕ್ರಮ'ವನ್ನು 2018 ರಿಂದ MSSRF-ಸಮುದಾಯ ಕೃಷಿ ಜೀವವೈವಿಧ್ಯ ಕೇಂದ್ರ, ವಯನಾಡ್‌ನಿಂದ ಪ್ರಾರಂಭಿಸಲಾಯಿತು. ಕೇರಳ, ವಿಶೇಷವಾಗಿ ವಯನಾಡ್ ದ್ವಿದಳ ಧಾನ್ಯಗಳ ವ್ಯಾಪಕವಾದ ಅನುವಂಶಿಕ ವೈವಿಧ್ಯತೆಗೆ ನೆಲೆಯಾಗಿದೆ, ಇದು ಪ್ರಾಥಮಿಕವಾಗಿ ಗೋವಿನಜೋಳ ಇದು ಆಹಾರದ ಅಂಗುಳಿನ ಪ್ರಮುಖ ಭಾಗವಾಗಿದೆ. ಈ ವೈವಿಧ್ಯತೆ ಮತ್ತು ಪೌಷ್ಟಿಕಾಂಶ ಮತ್ತು ಜೀವನೋಪಾಯದ ಭದ್ರತೆಯನ್ನು ಹೆಚ್ಚಿಸಲು ಅದರ ಸಾಮರ್ಥ್ಯವನ್ನು ಬಳಸಿಕೊಳ್ಳಲು, ಬೇಳೆಕಾಳುಗಳ ಉತ್ಪಾದನೆ ಮತ್ತು ಸಂರಕ್ಷಣೆಗಾಗಿ ಒಂದು ಹಳ್ಳಿಯಲ್ಲಿ ವಿವಿಧ ರೈತರನ್ನು ಒಟ್ಟುಗೂಡಿಸಲು ಕಾರ್ಯಕ್ರಮವನ್ನು ಪ್ರಾರಂಭಿಸಲಾಯಿತು. ಸುಗ್ಗಿಯ ನಂತರ ಭತ್ತದ ಗದ್ದೆಯಲ್ಲಿ ಬೆಳೆಯಲು ಸಮುದಾಯಕ್ಕೆ ಉತ್ತಮ ಗುಣಮಟ್ಟದ ದ್ವಿದಳ ಧಾನ್ಯಗಳನ್ನು (ಗೋವಿನಜೋಳ) ಒದಗಿಸಲಾಗಿದೆ. 3 ವರ್ಷಗಳ ಅವಧಿಯಲ್ಲಿ, ದ್ವಿದಳ ಧಾನ್ಯಗಳ ಗ್ರಾಮಗಳು ವಯನಾಡ್ ಮತ್ತು ಕಣ್ಣೂರು ಜಿಲ್ಲೆಯ ಒಂಬತ್ತು ಸೈಟ್‌ಗಳಾದ ಪೆರಲಸ್ಸೆರಿ, ಆನೆರಿ, ಪುತ್ತೂರ್‌ವಾಯಲ್, ಅತ್ತಿಕೊಲ್ಲಿ, ಪರಮೂಲ, ನಂಬಿಕೊಲ್ಲಿ, ಕಲ್ಲಮ್‌ಚಿರಾ, ಆಲತ್ತೂರು ಮತ್ತು ಪಳ್ಳಿಯಾರ ಗ್ರಾಮಗಳಲ್ಲಿ 64 ಎಕರೆಗಳಿಗೆ ವಿಸ್ತರಿಸಿದೆ.

ಈ ಕಾರ್ಯಕ್ರಮವು ಜಿಲ್ಲೆಯಾದ್ಯಂತ ಮುಖ್ಯವಾಗಿ ಬುಡಕಟ್ಟು ಸಮುದಾಯಗಳನ್ನು ಕೇಂದ್ರೀಕರಿಸಿದ ಸುಮಾರು 67 ಕುಟುಂಬಗಳಿಗೆ ಪ್ರಯೋಜನವನ್ನು ನೀಡುತ್ತಿದೆ. CAbC ಯ ಆಯ್ದ ಪ್ರೋಗ್ರಾಂ ಸೈಟ್‌ಗಳಲ್ಲಿ ಬೇಳೆಕಾಳುಗಳ ಉತ್ಪಾದನೆಯನ್ನು ಹೆಚ್ಚಿಸಲು ಉತ್ತಮ ಗುಣಮಟ್ಟದ ದ್ವಿದಳ ಧಾನ್ಯಗಳ ಲಭ್ಯತೆಯನ್ನು ಖಚಿತಪಡಿಸಿಕೊಳ್ಳಲು ಈ ಚಟುವಟಿಕೆಯನ್ನು ವಿಶೇಷವಾಗಿ ನಡೆಸಲಾಯಿತು. ದ್ವಿದಳ ಧಾನ್ಯಗಳ ಗ್ರಾಮ ಕಾರ್ಯಕ್ರಮವು ಹವಾಮಾನ ಸ್ಥಿತಿಸ್ಥಾಪಕ, ಪ್ರೋಟೀನ್-ಸಮೃದ್ಧ ಬೆಳೆಯಾಗಿರುವುದರಿಂದ ಬಡವರ ಜೀವನ ಮತ್ತು ಪೋಷಣೆಯನ್ನು ಹೆಚ್ಚಿಸುತ್ತದೆ. ಭತ್ತದ ಗದ್ದೆಗಳಲ್ಲಿ ಹಿಂಗಾರು ಹಂಗಾಮಿನಲ್ಲಿ ಶೂನ್ಯ ವೆಚ್ಚದ ಮೂಲಕ ಮಣ್ಣಿನ ಆರೋಗ್ಯವನ್ನು ಸುಧಾರಿಸುವುದು ಕಾರ್ಯಕ್ರಮದ ಇತರ ಉದ್ದೇಶವಾಗಿದೆ. ಉಳುಮೆಯ ಹೆಚ್ಚುತ್ತಿರುವ ವೆಚ್ಚ ಮತ್ತು ಅನಿಯಮಿತ ಮಳೆಯು ಚಟುವಟಿಕೆಯ ಅಳೆಯುವಿಕೆಗೆ ಎದುರಿಸುತ್ತಿರುವ ಪ್ರಮುಖ ಸವಾಲುಗಳಾಗಿವೆ ಆದರೆ ಅದೇನೇ ಇದ್ದರೂ, ಕಡಿಮೆ ಇನ್ಪುಟ್-ಇಂಟೆನ್ಸಿವ್ ಬೆಳೆಯಾಗಿ, ದ್ವಿದಳ ಧಾನ್ಯಗಳು ಹೆಚ್ಚುವರಿ ಆದಾಯವನ್ನು ಪಡೆಯಲು ರೈತರಿಗೆ ಸಹಾಯ ಮಾಡುತ್ತವೆ ಮತ್ತು ದ್ವಿದಳ ಧಾನ್ಯಗಳ ಮೂಲಕ ಹೆಚ್ಚುವರಿ ಪೋಷಣೆಯನ್ನು ಪಡೆಯುತ್ತವೆ. ದ್ವಿದಳ ಧಾನ್ಯ ಗ್ರಾಮ ಕಾರ್ಯಕ್ರಮದ ಮೂಲಕ ತಲುಪಿದ ಗುರಿಗಳು ಸೇರಿವೆ

**ದ್ವಿದಳ ಧಾನ್ಯಗಳ ಅಗತ್ಯ**

ದ್ವಿದಳ ಧ್ಯಾನಗಳು ಹೆಚ್ಚು ಪ್ರೋಟೀನ್ ಅಂಶಗಳನ್ನು ಹೊಂದಿದ್ದು, ಮಾಂಸಕ್ಕೆ ಸರಿ ಸಮಾನವಾಗಿದೆ. ಅಲ್ಲದೇ ಮಾಂಸಕ್ಕಿಂತ ಕಡಿಮೆ ಕೊಬ್ಬಿನಾಂಶ ಇರುವುದರಿಂದ ಕೊಲೆಸ್ಟ್ರಾಲ್ ನಿಯಂತ್ರಣ ಮತ್ತು ಬೇಗ ಜೀರ್ಣ ಕ್ರಿಯೆ ಆಗುವ ಸಾಮರ್ಥ್ಯ ಇರುವುದರಿಂದ ರಕ್ತದಲ್ಲಿನ ಸಕ್ಕರೆ ನಿರ್ವಹಣೆಯಲ್ಲಿ ಸಹಾಯ ಮಾಡುತ್ತವೆ. ಆರೋಗ್ಯ ಸಂಸ್ಥೆಗಳು ಮಧುಮೇಹ, ಹೃದಯ ಸಂಬಂಧಿ ಕಾಯಿಲೆ ಮತ್ತು ಸಾಂಕ್ರಾಮಿಕವಲ್ಲದ ಕಾಯಿಲೆಗಳಿಗೆ ದ್ವಿದಳ ಧಾನ್ಯಗಳನ್ನು ತಿನ್ನಲು ಶಿಫಾರಸು ಮಾಡುತ್ತವೆ. ಬೊಜ್ಜು ಕರಗಿಸುವಲ್ಲಿ ದ್ವಿದಳ ಧಾನ್ಯಗಳು ಪರಿಣಾಮಕಾರಿಯಾಗಿವೆ. ದ್ವಿದಳ ಧಾನ್ಯಗಳಲ್ಲಿ ಸಾರಜನಕ – ಫಿಕ್ಸಿಂಗ್ ಗುಣಲಕ್ಷಣಗಳಿರುತ್ತದೆ. ಇದು ಮಣ್ಣಿನ ಫಲವತ್ತತೆಯನ್ನು ಹೆಚ್ಚಿಸಿ ಕೃಷಿ ಭೂಮಿಯ ಉತ್ಪಾದಕತೆಯನ್ನು ಉತ್ತೇಜಿಸುತ್ತವೆ.

ಪ್ರಮುಖವಾಗಿ ದ್ವಿದಳ ಧಾನ್ಯಗಳೆಂದರೆ, ಕಡಲೆ, ಮೂಂಗ್ ಬೀನ್ಸ್, ಉರಡ್, ಮಸೂರ್, ಬಟಾಣಿ ಮತ್ತು ವಿವಿಧ ಬೀನ್ಸ್ ಸೇರಿವೆ. ಹೆಚ್ಚಿನ ಉತ್ಪಾದಕತೆಯ ಪ್ರದೇಶಗಳಲ್ಲಿ ಪಂಜಾಬ್, ಹರಿಯಾಣ, ಪಶ್ಚಿಮ ಉತ್ತರ ಪ್ರದೇಶ ಮತ್ತು ಇತರ ರಾಜ್ಯಗಳಲ್ಲಿ ಬೆಳೆಯಲಾಗುತ್ತದೆ.

ಮಾಂಸಾಹಾರಿ ಆಹಾರಗಳು ಹೆಚ್ಚುತ್ತಿರುವ ಹೊರತಾಗಿಯೂ, ಹೆಚ್ಚಿನ ಭಾರತೀಯರಿಗೆ ದ್ವಿದಳ ಧಾನ್ಯಗಳು ಪ್ರಮುಖ ಪ್ರೋಟೀನ್ ಮೂಲವಾಗಿ ಉಳಿದಿವೆ. ಭಾರತೀಯರ ಆಹಾರದಲ್ಲಿ ಪ್ರೋಟೀನ್‌ಗಳು, ಹಣ್ಣುಗಳು ಮತ್ತು ತರಕಾರಿಗಳ ಕೊರತೆಯಿದೆ. ಇದು ದ್ವಿದಳ ಧಾನ್ಯಗಳ ಮಹತ್ವವನ್ನು ಒತ್ತಿ ಹೇಳುತ್ತದೆ. ॐ

# ಕೆ. ಎಸ್. ನಿಸ್ಸಾರ್ ಅಹಮದ್



ಪ್ರೊ.ಕೆ.ಎಸ್.ನಿಸಾರ್ ಅಹಮದ್ 5 ಫೆಬ್ರವರಿ 1936 ರಂದು ಬೆಂಗಳೂರು ಜಿಲ್ಲೆಯ ದೇವನಹಳ್ಳಿಯಲ್ಲಿ ಜನಿಸಿದರು. ಇವರು ಕನ್ನಡದ ಪ್ರಮುಖ ಕವಿಯಾಗಿದ್ದರು. ಅವರ ಪೂರ್ಣ ಹೆಸರು ಕೊಕ್ಕರೆಹೊಸಳ್ಳಿ ಶೇಖ್ ಹೈದರ್ ನಿಸಾರ್ ಅಹಮದ್. ಅವರು ಬರೆದ 'ಜೋಗದ ಸಿರಿ ಬೆಳಕಿನಲ್ಲಿ ತುಂಗೆಯ ತೆನೆ ಬಳುಕಿನಲ್ಲಿ' ಎಂಬ ಪದ್ಯವು ಬಹಳ ಜನಪ್ರಿಯವಾಗಿ ಅವರು ನಿತ್ಯೋತ್ಸವ ಕವಿಯೆಂದೂ ಕರೆಯಲ್ಪಡುತ್ತಿದ್ದರು.

**ಜೀವನ**

ನಿಸಾರ್ ಅಹಮದ್ ಫೆಬ್ರುವರಿ 1959ರಲ್ಲಿ ಭೂರಚನಶಾಸ್ತ್ರ ಭೂವಿಜ್ಞಾನದಲ್ಲಿ ಸ್ನಾತಕೋತ್ತರ ಪದವಿ ಪಡೆದರು. 1994ರ ವರೆಗೆ ವಿವಿಧ ಸರಕಾರಿ ಕಾಲೇಜುಗಳಲ್ಲಿ ಅಧ್ಯಾಪಕ ಹಾಗೂ ಪ್ರಾಧ್ಯಾಪಕರಾಗಿ ಕೆಲಸ ಮಾಡಿ ನಿವೃತ್ತರಾದರು. ಇವರು ಒಬ್ಬ ಭಾರತೀಯ ಕವಿ ಮತ್ತು ಕನ್ನಡ ಭಾಷೆಯ ಬರಹಗಾರ. ಅವರಿಗೆ 2008 ರಲ್ಲಿ ಪದ್ಮಶ್ರೀ ಪ್ರಶಸ್ತಿ, 1981 ರಲ್ಲಿ ರಾಜ್ಯೋತ್ಸವ ಪ್ರಶಸ್ತಿ ಮತ್ತು 2017 ರಲ್ಲಿ ಪಂಪ ಪ್ರಶಸ್ತಿಯನ್ನು ಅವರು ಸಲ್ಲಿಸಿದ ಸೇವೆಗಾಗಿ ನೀಡಲಾಯಿತು. ಅವರು ತಮ್ಮ ನಿತ್ಯೋತ್ಸವ (ದೈನಂದಿನ ಆಚರಣೆ) ಎಂಬ ಕೃತಿಗೆ ಮನೆಯ ಹೆಸರಾದರು, ಇದು ಕರ್ನಾಟಕದ ಬಗ್ಗೆ ಒಂದು ಕವಿತೆಯಾಗಿದೆ, ಜೋಗ್ ಫಾಲ್ಸ್ ನೋಡಿದ ನಂತರ ಅವರು ರಚಿಸಿದ ತುಣುಕು. ಅವರು ಹಲವಾರು ಕವಿತೆಗಳು, ಅನುವಾದಗಳು ಮತ್ತು ಮಕ್ಕಳ ಪುಸ್ತಕಗಳನ್ನು ಬರೆದಿದ್ದಾರೆ. ಅವರು ತಮ್ಮ ಸಾಹಿತ್ಯಿಕ ಕೆಲಸದಲ್ಲಿ ಸಾರ್ವಜನಿಕರೊಂದಿಗೆ ಆಳವಾಗಿ ಅನುಕರಣಿಸುವ ಸರಳ ಪದಗಳನ್ನು ಬಳಸುವುದರಲ್ಲಿ ಹೆಸರುವಾಸಿಯಾಗಿದ್ದಾರೆ.

**ಆರಂಭಿಕ ಜೀವನ ಮತ್ತು ಶಿಕ್ಷಣ**

ನಿಸ್ಸಾರ್ ಅಹಮದ್ ಅವರು ಬೆಂಗಳೂರು ಗ್ರಾಮಾಂತರದ ದೇವನಹಳ್ಳಿಯಲ್ಲಿ ಜನಿಸಿದರು. ಅವರ ತಂದೆ ಸರ್ಕಾರಿ ಉದ್ಯೋಗಿ. ಅವರ ಕುಟುಂಬ ಬೆಂಗಳೂರಿನ ದೊಡ್ಡ ಮಾವಳ್ಳಿಗೆ ಸ್ಥಳಾಂತರಗೊಂಡಿತು. ಅವರು ಸುಮಾರು 500 ಮುಸ್ಲಿಂ ಕುಟುಂಬಗಳನ್ನು ಹೊಂದಿರುವ ಮುಸ್ಲಿಂ ಕಾಲೋನಿಯಲ್ಲಿ ಬೆಳೆದರು. ಅವರಿಗೆ ಸರ್ಕಾರಿ ನೌಕರಿ ಸಿಗುವ ಹಾದಿಯನ್ನು ಸುಗಮಗೊಳಿಸುವ ಉದ್ದೇಶದಿಂದ ಅವರ ತಂದೆ ಕನ್ನಡ ಮಾಧ್ಯಮ ಶಾಲೆಗೆ ಸೇರಿಸಿದರು. ನೆರೆಹೊರೆಯವರಲ್ಲಿ ಹೆಚ್ಚಿನ ಮಕ್ಕಳು ಉರ್ದು ಓದುತ್ತಿದ್ದರು.

**ಶಿಕ್ಷಕ ವೃತ್ತಿ**

ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ ಭೂವಿಜ್ಞಾನದಲ್ಲಿ ಉಪನ್ಯಾಸಕರಾಗಿ ನಂತರ ಚಿತ್ರದುರ್ಗದಲ್ಲಿ ಕೆಲಸ ಮಾಡಿದರು. ನಂತರ, ಅವರು ಶಿವಮೊಗ್ಗದ ಸಹ್ಯಾದ್ರಿ ಪ್ರಥಮ ದರ್ಜೆ ಕಾಲೇಜಿನಲ್ಲಿ 1967–72 ಮತ್ತು 1975–78 ರ ಅವಧಿಯಲ್ಲಿ ಎರಡು ಅವಧಿಗೆ ಶಿಕ್ಷಕರಾಗಿದ್ದರು.

ಅವರು ಪ್ರೌಢಶಾಲೆಯಲ್ಲಿ ಅವರ ಶಿಕ್ಷಕರಾಗಿದ್ದ ಲೇಖಕರಾದ ಜಿ.ಪಿ.ರಾಜರತ್ನಂ ಮತ್ತು ಎಂ.ವಿ.ಸೀತಾರಾಮಯ್ಯ ಅವರಿಂದ ಪ್ರೇರಿತರಾಗಿದ್ದರು.

**ಬರಹಗಾರ**

